ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ

NIMMURU SUDDI

ಸಂಪಾದಕರು: ಸುಂದರ್

Editor : Sundar

ಏಕ ಕಾಲಕ್ಕೆ
ಬಳ್ಳಾರಿ,
ಕೊಪ್ಪಳ,
ಯಾದಗಿರಿ,
ರಾಯಚೂರು,
ಕಲಬುರ್ಗಿ,
ಬೀದರ,
ವಿಜಯನಗರ
ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 300 RNI Number : KNKAN/25/A2770 14-11-2026 Saturday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ:300 ರಾಯಚೂರು 14-11-2026 ಶನಿವಾರ ಪುಟ 04 ಬೆಲೆ ರೂ.2/- Postal Reg Number:RCR/L/RNP/117/2026-28

ನಮ್ಮ ಮೆಟ್ರೋದ ಪಿಂಕ್‌ಲೈನ್ ಮೆಟ್ರೋ ಲೋಕಾರ್ಪಣೆ ಮಾಡಿದ ಪ್ರಧಾನಿ ಮೋದಿ

ಬೆಂಗಳೂರು,ನ.13- ರಾಜಧಾನಿ ಬೆಂಗಳೂರಿನ ಸಾರ್ವಜನಿಕ ಸಾರಿಗೆ ವ್ಯವಸ್ಥೆಗೆ ಮತ್ತೊಂದು ಮಹತ್ವದ ಸೇರ್ಪಡೆಯಾಗಿ, ನಮ್ಮ ಮೆಟ್ರೋದ ಪಿಂಕ್ ಲೈನ್‌ನ ಕಾಳೇನಅಗ್ರಹಾರ-ತಾವರೆಕೆರೆ ನಡುವಿನ 7.5 ಕಿಲೋಮೀಟರ್ ಉದ್ದದ ಎಲಿವೇಟೆಡ್ ಮಾರ್ಗವನ್ನು ಪ್ರಧಾನಿ ನರೇಂದ್ರ ಮೋದಿ ಅವರು ಸಾರ್ವಜನಿಕರ ಸೇವೆಗೆ ಲೋಕಾರ್ಪಣೆಗೊಳಿಸಿದರು.

ಈ ಮೂಲಕ ಬೆಂಗಳೂರಿನ ನಮ ಮೆಟ್ರೋ ರೈಲು ರಾಷ್ಟ್ರ ರಾಜಧಾನಿ ನವದೆಹಲಿಯ ನಂತರ 2ನೇ ಅತಿ ಉದ್ದದ ಮೆಟ್ರೋ ಜಾಲ ಹೊಂದಿದ 2ನೇ ನಗರ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ರಾಜಧಾನಿ ಬೆಂಗಳೂರಿನ ಹೆಮೆಯ ನಮ ಮೆಟ್ರೋ ರೈಲು ಇದೀಗ ಮೊದಲ ಬಾರಿಗೆ 100 ಕಿಲೋಮೀಟರ್ ಗಡಿ ದಾಟಿ ಸುಮಾರು 103.6 ಕಿಲೋಮೀಟರ್‌ಗೆ ವಿಸ್ತರಣೆಯಾಗಿದೆ.

ನಗರದ ತಾವರೆಕೆರೆ ಮೆಟ್ರೋ ನಿಲ್ದಾಣದ ಬಳಿ ನಡೆದ ಉದ್ಘಾಟನಾ ಕಾರ್ಯಕ್ರಮದಲ್ಲಿ ನರೇಂದ್ರಮೋದಿ ಅವರು ಪಿಂಕ್ ಲೈನ್ ಮಾರ್ಗಕ್ಕೆ ಹಸಿರುನಿಶಾನೆ ತೋರಿದರು.ರಾಜ್ಯಪಾಲರಾದ ಡಾ.ಸುಧಾ ಯಾದವ್, ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವ ಕೃಷ್ಣ ಬೈರೇಗೌಡ, ಸಂಸದ ತೇಜಸ್ವಿ ಸೂರ್ಯ ಸೇರಿದಂತೆ ಮತ್ತಿತರರು ಭಾಗಿಯಾಗಿದ್ದರು. ನಂತರ ಮೋದಿ ಸೇರಿದಂತೆ ಹಲವು ಗಣ್ಯರು ತಾವರೆಕೆರೆಯಿಂದ ಐಐಎಂಬಿ ಮೆಟ್ರೋ ನಿಲ್ದಾಣದವರೆಗೆ ರೈಲಿನಲ್ಲಿ ಪ್ರಯಾಣಿಸಿದರು.

ಈ ಹೊಸ ಮಾರ್ಗವು ವಿಶೇಷವಾಗಿ ಬನ್ನೇರುಘಟ್ಟ ರಸ್ತೆ ಹಾಗೂ ದಕ್ಷಿಣ ಬೆಂಗಳೂರಿನ ಭಾಗಗಳಲ್ಲಿ ಸಂಚಾರ ಸಂಪರ್ಕವನ್ನು ಸುಧಾರಿಸುವ ನಿರೀಕ್ಷೆಯಿದೆ. ಪ್ರತಿದಿನದ ವಾಹನ ಸಂಚಾರದಟ್ಟಣೆ, ಪ್ರಯಾಣದ ಸಮಯ ಮತ್ತು ರಸ್ತೆ ಮೇಲಿನ ಒತ್ತಡವನ್ನು ಕಡಿಮೆ ಮಾಡಲು ಈ ಮಾರ್ಗ ಪ್ರಮುಖ ಪಾತ್ರ ವಹಿಸುವ ಸಾಧ್ಯತೆಯಿದೆ.



ಕಾಳೇನಅಗ್ರಹಾರ-ತಾವರೆಕೆರೆ ಎಲಿವೇಟೆಡ್ ಭಾಗವನ್ನು ಸುಮಾರು 3,470 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗಿದೆ. ಪ್ರಯಾಣಿಕರಿಗೆ ನಾಳೆಯಿಂದ ಸೇವೆ ಆರಂಭವಾಗಲಿದೆ.ಪಿಂಕ್ ಲೈನ್ ಸಂಪರ್ಕಿಸುವ ಪ್ರದೇಶಗಳು ಪ್ರಸ್ತುತ ಉದ್ಘಾಟನೆಯಾಗಿರುವ 7.5 ಕಿ.ಮೀ. ಮಾರ್ಗದಲ್ಲಿ ಒಟ್ಟು ಆರು ನಿಲ್ದಾಣಗಳಿದ್ದು, ಕಾಳೇನ ಅಗ್ರಹಾರ, ಹುಳಿಮಾವು, ಐಐಎಂಬಿ ಬಿಳೇಕಹಳ್ಳಿ, ಜೆ.ಪಿ. ನಗರ 4ನೇ ಹಂತ, ಜಯದೇವ ಆಸ್ಪತ್ರೆ, ತಾವರೆಕೆರೆಯನ್ನು ಒಳಗೊಂಡಿದೆ. ಜಯದೇವ ಆಸ್ಪತ್ರೆ ನಿಲ್ದಾಣದಲ್ಲಿ ಯೆಲ್ಲೋ ಲೈನ್‌ಗೆ ಸಂಪರ್ಕ ದೊರೆಯುವುದರಿಂದ ಎಲೆಕ್ಟ್ರಾನಿಕ್ ಸಿಟಿ ಭಾಗಕ್ಕೆ ತೆರಳುವ ಪ್ರಯಾಣಿಕರಿಗೆ ಅನುಕೂಲವಾಗಲಿದೆ.

ಎಲ್ಲೆಲ್ಲಿಗೆ ಸಂಪರ್ಕ?

ಸಂಪೂರ್ಣ 21.26 ಕಿ.ಮೀ. ಪಿಂಕ್ ಲೈನ್ ದಕ್ಷಿಣ ಬೆಂಗಳೂರಿನ ಕಾಳೇನಅಗ್ರಹಾರದಿಂದ ಉತ್ತರ ಬೆಂಗಳೂರಿನ ನಾಗವಾರದವರೆಗೆ ಸಂಪರ್ಕ ಕಲ್ಪಿಸಲಿದೆ. ಒಟ್ಟು 18 ನಿಲ್ದಾಣಗಳನ್ನು ಹೊಂದಲಿರುವ ಈ ಮಾರ್ಗದಲ್ಲಿ ತಾವರೆಕೆರೆ-ನಾಗವಾರ ಭಾಗವು ಭೂಗತ ಮಾರ್ಗವಾಗಿರಲಿದೆ.

ಮುಂದಿನ ಹಂತದಲ್ಲಿ ಈ ಮಾರ್ಗವು ಡೇರಿ ಸರ್ಕಲ್, ಲಕ್ಕಸಂದ್ರ, ಲ್ಯಾಂಗ್‌ಫೋರ್ಡ್ ಟೌನ್, ನ್ಯಾಷನಲ್ ಮಿಲಿಟರಿ ಸ್ಕೂಲ್, ಎಂಜಿ ರಸ್ತೆ, ಶಿವಾಜಿನಗರ, ಕಂಟೋನೆಂಟ್, ಪಾಟರಿ ಟೌನ್, ಟ್ಯಾನರಿ ರಸ್ತೆ, ವೆಂಕಟೇಶಪುರ, ಕಡುಗೊಂಡನಹಳ್ಳಿ ಮತ್ತು ನಾಗವಾರ ಭಾಗಗಳಿಗೆ ಸಂಪರ್ಕ ಕಲ್ಪಿಸಲಿದೆ.

ಹೀಗಾಗಿ ಪಿಂಕ್ ಲೈನ್ ಪೂರ್ಣಗೊಂಡ ಬಳಿಕ ದಕ್ಷಿಣ ಬೆಂಗಳೂರಿನ ಕಲೇನ ಅಗ್ರಹಾರ-ಬನ್ನೇರುಘಟ್ಟ ರಸ್ತೆ ಪ್ರದೇಶದಿಂದ ಉತ್ತರ ಬೆಂಗಳೂರಿನ ನಾಗವಾರದವರೆಗೆ ನೇರ ಮೆಟ್ರೋ ಸಂಪರ್ಕ ಸಿಗಲಿದೆ. ಐಐಎಂಬಿ, ಜಯದೇವ ಆಸ್ಪತ್ರೆ, ಜೆ.ಪಿ.ನಗರ, ಎಂಜಿ ರಸ್ತೆ, ಶಿವಾಜಿನಗರ ಸೇರಿದಂತೆ ಪ್ರಮುಖ ವಾಣಿಜ್ಯ, ಶಿಕ್ಷಣ, ವೈದ್ಯಕೀಯ ಮತ್ತು ವಸತಿ ಪ್ರದೇಶಗಳಿಗೆ ಸಂಪರ್ಕ ಮತ್ತಷ್ಟು ಸುಗಮವಾಗಲಿದೆ.

ಹೊಸ ಮಾರ್ಗದ 6 ನಿಲ್ದಾಣಗಳು

ತಾವರೆಕೆರೆಯಿಂದ ನಾಗವಾರದವರೆಗಿನ 13.8 ಕಿ.ಮೀ. ಉದ್ದದ ಸುರಂಗ ಮಾರ್ಗದ ಕಾಮಗಾರಿಯು 2027ಕ್ಕೆ ಮುಕ್ತಾಯಗೊಳ್ಳಲಿದೆ. ನಮ ಮೆಟ್ರೋ ಗುಲಾಬಿ ಮಾರ್ಗದಲ್ಲಿ ಒಟ್ಟು 18 ನಿಲ್ದಾಣಗಳಿದ್ದು ಬನ್ನೇರುಘಟ್ಟ ರಸ್ತೆಯ ಎತ್ತರಿಸಿದ ಮಾರ್ಗದಲ್ಲಿರುವ ಕಾಳೇನ ಅಗ್ರಹಾರ, ಹುಳಿಮಾವು, ಐಐಎಂಬಿ ಬೆಂಗಳೂರು , ಜೆ.ಪಿ. ನಗರ 4ನೇ ಹಂತ, ಜಯದೇವ ಆಸ್ಪತ್ರೆ, ತಾವರೆಕೆರೆ ನಿಲ್ದಾಣಗಳು ಈಗ ರೈಲು ಸಂಚಾರಕ್ಕೆ ಮುಕ್ತವಾಗಲಿವೆ.

ಪ್ರಧಾನಮಂತ್ರಿ ನರೇಂದ್ರಮೋದಿ ಅವರಿಂದ ಪಿಂಕ್ ಲೈನ್‌ನ ಮೊದಲ ಹಂತದ ಉದ್ಘಾಟನೆಯು ಬೆಂಗಳೂರಿನ ಮೆಟ್ರೋ ವಿಸ್ತರಣೆಯಲ್ಲಿ ಮಹತ್ವದ ಮೈಲಿಗಲ್ಲಾಗಿದ್ದು, ನಗರದ ಮೆಟ್ರೋ ಜಾಲವನ್ನು 100 ಕಿ.ಮೀ. ಗಡಿ ದಾಟಿಸಿರುವುದರ ಜೊತೆಗೆ, ದಕ್ಷಿಣ-ಉತ್ತರ ಬೆಂಗಳೂರಿನ ಸಂಪರ್ಕವನ್ನು ಮತ್ತಷ್ಟು ಬಲಪಡಿಸುವ ನಿರೀಕ್ಷೆಯಿದೆ.

ದಿ.17: ಆಶಾಕಾರ್ಯಕರ್ತರಿಗೆ 15 ಸಾವಿರ ಗೌರವಧನ ಸೇರಿ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಬೆಂಗಳೂರಿನಲ್ಲಿ ರಾಜ್ಯಮಟ್ಟದ ಅನಿರ್ದಿಷ್ಟ ಹೋರಾಟ

ರಾಯಚೂರು, ನ.13- ಆಶಾ ಕಾರ್ಯಕರ್ತರಿಗೆ ಮಾಸಿಕ 15 ಸಾವಿರ ಕನಿಷ್ಠ ಗೌರವಧನ ನೀಡಬೇಕು ಸೇರಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ನ.17ರಿಂದ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಆಶಾ ಕಾರ್ಯಕರ್ತೆಯರು ರಾಜ್ಯಮಟ್ಟದ ಅನಿರ್ದಿಷ್ಟ ಅಹೋರಾತ್ರಿ ಹೋರಾಟ ಹಮ್ಮಿಕೊಳ್ಳಲಾಗಿದೆ ಎಂದು ಎಐಯುಟಿಯುಸಿ ರಾಜ್ಯ ಉಪಾಧ್ಯಕ್ಷ ವೀರೇಶ್ ಎನ್.ಎಸ್. ಹೇಳಿದರು.



ಅವರಿಂದು ನಗರದ ಸುದ್ದಿಗಾರರೊಂದಿಗೆ ಮಾತನಾಡಿ, ಕಳೆದ ಅನೇಕ ವರ್ಷಗಳಿಂದ ಗ್ರಾಮೀಣ ಪ್ರದೇಶಗಳು ಹಾಗೂ ನಗರಗಳ ಕೊಳಚೆ ಪ್ರದೇಶಗಳಲ್ಲಿ ಬಡಜನರ ಮನೆ ಬಾಗಿಲಿಗೆ ಆರೋಗ್ಯ ಸೇವೆ ತಲುಪಿಸುವ ಮಹತ್ತರ ಜವಾಬ್ದಾರಿಯನ್ನು ಆಶಾ ಕಾರ್ಯಕರ್ತೆಯರು ನಿರ್ವಹಿಸುತ್ತಿದ್ದಾರೆ. ಕೊರೋನಾ ಸಂದರ್ಭದಲ್ಲಿ ಮುಂಚೂಣಿ ಕಾರ್ಯಕರ್ತೆಯರಾಗಿ ಜೀವದ ಹಂಗು ತೊರೆದು ಸೇವೆ ಸಲ್ಲಿಸಿರುವ ಅವರ ಕೊಡುಗೆ ಅಪಾರವಾಗಿದೆ. ಆದರೆ ಹಗಲು-ರಾತ್ರಿ ಎನ್ನದೆ, ರಜೆ ಹಾಗೂ ಹಬ್ಬದ ದಿನಗಳನ್ನೂ ಲೆಕ್ಕಿಸದೆ ದುಡಿಯುವ ಆಶಾ ಕಾರ್ಯಕರ್ತೆಯರಿಗೆ ಮಾತ್ರ ಸಮರ್ಪಕ ಗೌರವಧನ ದೊರೆಯುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಆಶಾ ಕಾರ್ಯಕರ್ತೆಯರು ನಿರ್ವಹಿಸುವ ಕೆಲಸಕ್ಕೆ ತಕ್ಕಂತೆ ಪ್ರತಿ ತಿಂಗಳು ನಿಗದಿತ ಗೌರವಧನ ಸಿಗುತ್ತಿಲ್ಲ. ಪ್ರೋತ್ಸಾಹಧನ ಮೂರು-ನಾಲ್ಕು ತಿಂಗಳಿಗೊಮ್ಮೆ ಬಿಡುಗಡೆಯಾಗುತ್ತಿದ್ದು, ಹಲವು ಕೆಲಸಗಳ ಪ್ರೋತ್ಸಾಹಧನವೂ ಬಾಕಿ ಉಳಿದಿದೆ. ಇದರಿಂದ ಕುಟುಂಬ ನಿರ್ವಹಣೆ, ಮಕ್ಕಳ ಶಿಕ್ಷಣ ಹಾಗೂ ದೈನಂದಿನ ಜೀವನದ ಖರ್ಚುಗಳನ್ನು ನಿಭಾಯಿಸುವುದು ಕಷ್ಟಕರವಾಗಿದೆ ಎಂದರು.

ಸಮಾಜದ ಆರೋಗ್ಯ ರಕ್ಷಣೆಯಲ್ಲಿ ಆಶಾ ಕಾರ್ಯಕರ್ತೆಯರ ಸೇವೆ ಅಪಾರವಾಗಿದೆ. ಅವರ ಸೇವೆಗೆ ತಕ್ಕ ಗೌರವಧನ ನೀಡುವಲ್ಲಿ ಸರ್ಕಾರಗಳು ನಿರ್ಲಕ್ಷ್ಯ ವಹಿಸಿವೆ ಎಂದರು.

ಕಳೆದ ಒಂಬತ್ತು ವರ್ಷಗಳಲ್ಲಿ ರಾಜ್ಯ ಸರ್ಕಾರ ಆಶಾ ಕಾರ್ಯಕರ್ತೆಯರ ಗೌರವಧನವನ್ನು

ಮೂರನೇಯ ಪುಟಕ್ಕೆ

ದಿ.15:ನೀರು ಕೊಡಿ ಇಲ್ಲ ವಿಷ ಕೊಡಿ ಎಂದು ಆಗ್ರಹಿಸಿ ನಾರಾಯಣಪುರ ಡ್ಯಾಂವರಿಗೆ ಬೃಹತ್ ಪಾದಯಾತ್ರೆ

ರಾಯಚೂರು, ನ.13-ರೈತರ ಬೆಳೆಗಳಿಗೆ ನೀರು ಕೊಡಿ




ಇಲ್ಲ ವಿಷ ಕೊಡಿ ಎಂದು ಆಗ್ರಹಿಸಿ ದಿ.15 ರಂದು ಗಬ್ಬೂರು ಶ್ರೀ ಬೂದಿಬಸವೇಶ್ವರ ಮಹಾದ್ವಾರದಿಂದ ನಾರಾಯಣಪುರ ಡ್ಯಾಂ ವರಿಗೆ ನೀರಿಗಾಗಿ ಬೃಹತ್ ರೈತರ ಪಾದಯಾತ್ರೆ ನಡೆಯಲಿದೆ ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಕೃಷಿ ಅಭಿವೃದ್ಧಿ ಸೇನೆ ರಾಜ್ಯಾಧ್ಯಕ್ಷರಾದ ಕೆ ಮಸ್ತಾನ ನಾಯಕ ಪೂಜಾರಿ ಅವರು ಹೇಳಿದರು.

ಅವರಿಂದು ನಗರದ ಸುದ್ದಿಗಾರರೊಂದಿಗೆ ಮಾತನಾಡಿ,ಅಂದು ಮಠಾಧೀಶರು ಪಾದಯಾತ್ರೆಗೆ ಚಾಲನೆ ನೀಡಲಿದ್ದು, ಈ ಪಾದಯಾತ್ರೆ ಗಬ್ಬೂರು ಬೂದಿಬಸವೇಶ್ವರ ಮಹಾದ್ವಾರದಿಂದ ಪ್ರಾರಂಭಗೊಂಡು, ದೇವದುರ್ಗ ಜಾಲಹಳ್ಳಿ ತಿಂಥಿಣಿ ಬ್ರಿಡ್ಜ್ ಕಕ್ಕೇರಿ ಕೊಡೇಕಲ್ ಮಾರ್ಗವಾಗಿ ದಿ.20 ರಂದು ನಾರಾಯಣಪುರ ಡ್ಯಾಂಗೆ ತಲುಪಲಿದೆ. ರಾಜ್ಯದ ವಿವಿಧ ರೈತ ಪರ ಸಂಘಟನೆಗಳು ಕನ್ನಡಪರ ಸಂಘಟನೆಗಳು ಹಾಗೂ ದಲಿತ ಪರ ಸಂಘಟನೆಗಳು ಸಮಾಜಸೇವಕರು ಬುದ್ದಿಜೀವಿಗಳ ಸಂಯುಕ್ತಾಶ್ರಯದಲ್ಲಿ ಈ ಬೃಹತ್ ಪಾದಯಾತ್ರೆ ನಡೆಯಲಿದ್ದು, ರೈತರ ಬೆಳೆಗಳಿಗೆ ನೀರು ಹರಿಸಬೇಕು ಎಂದು ನಡೆಯುವ ಪಾದಯಾತ್ರೆಯಲ್ಲಿ ಜಿಲ್ಲೆಯ ಎಲ್ಲಾ ರೈತರು ಪಾಲ್ಗೊಂಡು ಯಶಸ್ವಿಗೊಳಿಸಬೇಕು ಎಂದು ಕೋರಿದರು.ಈ ಸಂದರ್ಭದಲ್ಲಿ ಡಿ. ಸತ್ಯರೆಡ್ಡಿ, ಸಂಗಮೇಶ ನಾಯಕ, ಆಂಜನೇಯ ಸ್ವಾಮಿ,ಸೇರಿದಂತೆ ಉಪಸ್ಥಿತರಿದ್ದರು.

ಮೂರನೇಯ ಪುಟಕ್ಕೆ

ಲಿಂಗಸೂಗೂರಿನ 13 ಮಸ್ಜಿದ್ ಕಮಿಟಿಗಳಿಗೆ ರಾಯಚೂರು ಜಿಲ್ಲಾ ವಕ್ಫ್ ಮಂಡಳಿಯಿಂದ ಬುಲಾವ್

ಲಿಂಗಸೂಗೂರ: ಲಿಂಗಸೂಗೂರ ಪುರಸಭೆ ವ್ಯಾಪ್ತಿಯಲ್ಲಿರುವ ಮಸ್ಜಿದ್ ಕಮಿಟಿಗಳ ಆಡಳಿತಾತ್ಮಕ ಕಾರ್ಯವೈಖರಿ, ಆರ್ಥಿಕ ವ್ಯವಹಾರಗಳು ಹಾಗೂ ಲಿಂಗಸೂಗೂರ ತಾಲೂಕಿನಲ್ಲಿ ವಕ್ಫ್ ಆಸ್ತಿಗಳ ನಿರ್ವಹಣೆ ಮತ್ತು ಸಂರಕ್ಷಣೆಗೆ ಸಂಬಂಧಿಸಿದಂತೆ ಸಮಗ್ರ ತನಿಖೆ ನಡೆಸಿ ಎಂದು ಅಂಜುಮನ್-ಎ-ಮುಸ್ಲಿಮೀನ್ ಲಿಂಗಸೂಗೂರ ತಾಲೂಕು ಕಮಿಟಿ ಸಲ್ಲಿಸಿದ್ದ ದೂರಿನ ಹಿನ್ನೆಲೆಯಲ್ಲಿ ರಾಯಚೂರು ಜಿಲ್ಲಾ ವಕ್ಫ್ ಮಂಡಳಿ ಅಧಿಕಾರಿಗಳು ತನಿಖಾ ಪ್ರಕ್ರಿಯೆಗೆ ಮುಂದಾಗಿದ್ದಾರೆ.



ಮಸ್ಜಿದ್ ಕಮಿಟಿಗಳ ಆಡಳಿತ ಮತ್ತು ಆರ್ಥಿಕ ವ್ಯವಹಾರಗಳಲ್ಲಿ ಪಾರದರ್ಶಕತೆ ಕಾಪಾಡುವ ಜೊತೆಗೆ, ವಕ್ಫ್ ಆಸ್ತಿಗಳ ಸಂರಕ್ಷಣೆ ಹಾಗೂ ಅವುಗಳ ಸಮರ್ಪಕ ನಿರ್ವಹಣೆ ಕುರಿತು ಪರಿಶೀಲನೆ ನಡೆಸಬೇಕು. ಅಲ್ಲದೆ, ಅಂಜುಮನ್ ಕಮಿಟಿಯ ವತಿಯಿಂದ ಸಮಾಜದ ಹಿತದೃಷ್ಟಿಯಿಂದ ಕೈಗೊಳ್ಳಲಾಗುವ ಸಾಮಾಜಿಕ ಕಳಕಳಿಯುಳ್ಳ ಎಲಾನ್‌ಗಳು (ಘೋಷಣೆಗಳು) ಮತ್ತು ಪ್ರಕಟಣೆಗಳನ್ನು ದುರುದ್ದೇಶಪೂರ್ವಕವಾಗಿ ತಡೆಹಿಡಿಯಲಾಗುತ್ತಿದೆ ಎಂಬ ಆರೋಪದ ಬಗ್ಗೆಯೂ ಸಮಗ್ರ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ಅಂಜುಮನ್ ಕಮಿಟಿಯು ದಿನಾಂಕ 15-10-2026ರಂದು ರಾಯಚೂರು ಜಿಲ್ಲಾ ವಕ್ಫ್ ಮಂಡಳಿ ಕಚೇರಿಗೆ ಅಧಿಕೃತ ದೂರು ಸಲ್ಲಿಸಿತ್ತು.

ಈ ದೂರನ್ನು ಪರಿಗಣಿಸಿರುವ ರಾಯಚೂರು ಜಿಲ್ಲಾ ವಕ್ಫ್ ಮಂಡಳಿ ಅಧಿಕಾರಿಗಳು ದಿನಾಂಕ 12-11-2026ರಂದು ತಮ್ಮ ಸಿಬ್ಬಂದಿಯ ಮೂಲಕ ಲಿಂಗಸೂಗೂರ ಪುರಸಭೆ ವ್ಯಾಪ್ತಿಗೆ ಒಳಪಡುವ ಒಟ್ಟು 13 ಮಸ್ಜಿದ್ ಕಮಿಟಿಗಳಿಗೆ ನೋಟಿಸ್ ಜಾರಿಗೊಳಿಸಿದ್ದಾರೆ. ಅದರಂತೆ ದಿನಾಂಕ

ಮೂರನೇಯ ಪುಟಕ್ಕೆ



ತಾಲೂಕ ಪಂ. ಸಹಾಯಕ ನಿರ್ದೇಶಕರಾಗಿ ವೆಂಕಟೇಶ ದೇಸಾಯಿ ಅಧಿಕಾರ ಸ್ವೀಕಾರ

ರಾಯಚೂರು, ನ.13-

ತಾಲೂಕ ಪಂಚಾಯತ್ ಸಹಾಯಕ ನಿರ್ದೇಶಕರಾಗಿ ವೆಂಕಟೇಶ್ ದೇಸಾಯಿ ಅವರು ಗುರುವಾರ ತಾಲೂಕ ಪಂಚಾಯತ್ ಕಚೇರಿಯಲ್ಲಿ ಅಧಿಕಾರ ಸ್ವೀಕರಿಸಿದರು. ತಾಲೂಕಿನ ಪಿಡಿಓಗಳು ವೆಂಕಟೇಶ್ ದೇಸಾಯಿ ಅವರಿಗೆ ಶಾಲು ವದಿಸಿ ಸನ್ಮಾನಿಸಿದರು.

ಈ ಸಂದರ್ಭದಲ್ಲಿ ಎಡಿ ಹನುಮಂತ,

ಪಿಡಿಓ ಕರೆಪ್ಪ, ಪಿಡಿಓ ಮಲ್ಲೇಶ, ಸರೋಜ ಸೇರಿದಂತೆ ಇನ್ನಿತರರ ಪಿಡಿಓಗಳು ಉಪಸ್ಥಿತರಿದ್ದರು.

ನ.15:ತಾಯಣ್ಣ ಯರಗೇರಾ ಭಾರತ ದರ್ಶನ ಪ್ರವಾಸ

ರಾಯಚೂರು, ನ.13-

ದೇಶದ ವಿವಿಧ ರಾಜ್ಯಗಳ ಜನಜೀವನ, ಸಂಸ್ಕೃತಿ, ಪರಿಸರ, ಉದ್ಯೋಗ ಹಾಗೂ ಆರೋಗ್ಯ ವ್ಯವಸ್ಥೆ ಸೇರಿದಂತೆ ದೇಶದ ವೈವಿಧ್ಯಮಯ ಬದುಕನ್ನು ಅರಿಯುವ ಉದ್ದೇಶದಿಂದ ರಾಯಚೂರಿನ ತಾಯಣ್ಣ ಯರಗೇರಾ ಅವರು ಸಪತ್ನೀಕರಾಗಿ ಒಂದು ವರ್ಷದ ಭಾರತ ದರ್ಶನ ಪ್ರವಾಸಕ್ಕೆ ಸಜ್ಜಾಗಿದ್ದಾರೆ ಎಂದು ಬಿ. ಬಸವರಾಜ್ ಹೇಳಿದರು.



ಅವರಿಂದು ನಗರದ ಸುದ್ದಿಗಾರರೊಂದಿಗೆ ಮಾತನಾಡಿ,

ನಗರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 68 ವರ್ಷ ವಯಸ್ಸಿನ ತಾಯಣ್ಣ ಯರಗೇರಾ ಅವರು ವಯಸ್ಸಿನ ಮಿತಿಯನ್ನು ಲೆಕ್ಕಿಸದೆ ಹೊಸ ಉತ್ಸಾಹ ಮತ್ತು ಸಾಹಸದ ಮನೋಭಾವದೊಂದಿಗೆ ದೇಶ ಪರ್ಯಟನೆಗೆ ಮುಂದಾಗಿರುವುದು ಶ್ಲಾಘನೀಯ ಸಂಗತಿಯಾಗಿದೆ ಎಂದರು.

ನ. 15, ರಿಂದ ಕ್ಯಾಂಪರ್ ವ್ಯಾನ್‌ನಲ್ಲಿ ತಮ್ಮ ಪತ್ನಿಯೊಂದಿಗೆ ಒಂದು ವರ್ಷದ ಪ್ರವಾಸ ಆರಂಭಿಸಲಿದ್ದಾರೆ. ಈ ಪ್ರವಾಸದ ಸಂದರ್ಭದಲ್ಲಿ ಭಾರತದ ವಿವಿಧ ರಾಜ್ಯಗಳು ಹಾಗೂ ಜಿಲ್ಲೆಗಳಿಗೆ ಭೇಟಿ ನೀಡಿ ಅಲ್ಲಿನ ಜನರ ಜೀವನಶೈಲಿ, ಸಾಮಾಜಿಕ ಪರಿಸ್ಥಿತಿ, ಪರಿಸರ ಸಂರಕ್ಷಣೆ, ಉದ್ಯೋಗಾವಕಾಶಗಳು, ಆರೋಗ್ಯ ಸೌಲಭ್ಯಗಳು ಸೇರಿದಂತೆ ಹಲವು ಪ್ರಮುಖ ವಿಚಾರಗಳನ್ನು ಹತ್ತಿರದಿಂದ ಅರಿತುಕೊಳ್ಳುವ ಉದ್ದೇಶ ಹೊಂದಿದ್ದಾರೆ. ಅಲ್ಲದೆ, ದೇಶದ ವಿವಿಧ ಭಾಗಗಳ ಜನರೊಂದಿಗೆ ಸಂಪರ್ಕ ಬೆಳೆಸಿ ಭಾರತ ದೇಶದ ಐಕ್ಯತೆ ಮತ್ತು ವೈವಿಧ್ಯತೆಯ ಸಂದೇಶವನ್ನು ಸಾರುವ ಆಶಯ ಹೊಂದಿದ್ದಾರೆ ಎಂದು ವಿವರಿಸಿದರು.

ನವೆಂಬರ್ 15ರಂದು ಬೆಳಿಗ್ಗೆ 8 ಗಂಟೆಗೆ ನಗರದ ಅಭಯಾಂಜನೇಯ ದೇವಸ್ಥಾನದಿಂದ ತಾಯಣ್ಣ ಯರಗೇರಾ ಅವರ ಭಾರತ ದರ್ಶನ ಪ್ರವಾಸಕ್ಕೆ ಚಾಲನೆ

ಮೂರನೇಯ ಪುಟಕ್ಕೆ

ರಾಯಚೂರು ಜಿಲ್ಲೆಯ 12 ಮಂದಿಗೆ ವಿವಿಧ ನಿಗಮ, ಮಂಡಳಿಗಳ ನಿರ್ದೇಶಕ-ಸದಸ್ಯ ಸ್ಥಾನ

ರಾಯಚೂರು : ಕರ್ನಾಟಕ ಸರ್ಕಾರದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ನಿಗಮಗಳು, ಮಂಡಳಿಗಳು ಹಾಗೂ ಪ್ರಾಧಿಕಾರಗಳಿಗೆ ರಾಯಚೂರು ಜಿಲ್ಲೆಯ 12 ಮಂದಿಯನ್ನು ನಿರ್ದೇಶಕರು ಮತ್ತು ಸದಸ್ಯರನ್ನಾಗಿ ನೇಮಕ ಮಾಡುವಂತೆ ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಜಂಟಿ ಕಾರ್ಯದರ್ಶಿ ಉಮಾ ಕೆ. ಅವರು ಸರ್ಕಾರದ ಎಲ್ಲ ಇಲಾಖೆಗಳ ಅಪರ ಮುಖ್ಯ ಕಾರ್ಯದರ್ಶಿಗಳು, ಪ್ರಧಾನ ಕಾರ್ಯದರ್ಶಿಗಳು ಹಾಗೂ ಕಾರ್ಯದರ್ಶಿಗಳಿಗೆ ಸೂಚಿಸಿದ್ದಾರೆ.



ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ ಸಿಂಧನೂರಿನ ಶ್ರೀನಿವಾಸ, ಜೆಸ್ಕಾಂ ನಿಗಮಕ್ಕೆ ರಾಯಚೂರಿನ ಚಂದ್ರಶೇಖರಪ್ಪ, ಕರ್ನಾಟಕ ಆದಿ ಜಾಂಬವ ಅಭಿವೃದ್ಧಿ ನಿಗಮಕ್ಕೆ ಮಾನ್ವಿ ತಾಲೂಕಿನ ತಾಯಪ್ಪ, ಕರ್ನಾಟಕ ಜೈವಿಕ ಇಂಧನ ಮಂಡಳಿಗೆ ರಾಯಚೂರಿನ ಜಿ. ಶಿವಮೂರ್ತಿ, ಕರ್ನಾಟಕ ತೊಗರಿ ಬೇಳೆ ಅಭಿವೃದ್ಧಿ ನಿಗಮಕ್ಕೆ ಸಿಂಧನೂರಿನ ನಿರುಪಾದಿ, ರಾಜ್ಯ ಖನಿಜ ನಿಗಮಕ್ಕೆ ಮಸ್ಕಿಯ ಹನುಮಂತಪ್ಪ, ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮಕ್ಕೆ ಮಾನ್ವಿ ತಾಲೂಕಿನ ಈರಮ್ಮ ಹಾಗೂ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಅಭಿವೃದ್ಧಿ ನಿಗಮಕ್ಕೆ ರಾಯಚೂರಿನ ಅಂಜನಕುಮಾರ ಮತ್ತು ಸಿಂಧನೂರಿನ ವೆಂಕಟೇಶ ರಾಗಲಪರ್ವಿ ಅವರನ್ನು ನೇಮಕ ಮಾಡಲಾಗಿದೆ.

ಉಳಿದಂತೆ ತುಂಗಭದ್ರಾ ಅಚ್ಚುಕಟ್ಟು ಪ್ರದೇಶ ಅಭಿವೃದ್ಧಿ ಪ್ರಾಧಿಕಾರಕ್ಕೆ ರಾಯಚೂರಿನ ಜಿ. ಶ್ರೀನಿವಾಸ ಹಾಗೂ ಗಾಂಧಿ ಸ್ಮಾರಕ ನಿಧಿಗೆ ಲಿಂಗಸುಗೂರಿನ ರಜ್ಜಬ್ ಅಲಿ ಅವರನ್ನು ನೇಮಕ ಮಾಡಲಾಗಿದೆ.

ಕರ್ನಾಟಕ ರಾಜ್ಯ ಲಿಂಬೆ ಅಭಿವೃದ್ಧಿ ನಿಗಮಕ್ಕೆ ರಾಯಚೂರಿನ ಜಾವಿದ್ ಉಲ್ ಹಕ್ ಅವರನ್ನು ನಿರ್ದೇಶಕ ಹಾಗೂ ಸದಸ್ಯರನ್ನಾಗಿ ನೇಮಕ ಮಾಡಲಾಗಿದೆ. ಆದರೆ, ಅವರು ಅನಾರೋಗ್ಯದ ಕಾರಣ ಇತ್ತೀಚೆಗೆ ನಿಧನರಾಗಿದ್ದಾರೆ. ಅವರ ನಿಧನದ ಬಳಿಕವೂ ನೇಮಕಾತಿ ಪಟ್ಟಿಯಲ್ಲಿ ಹೆಸರು ಪ್ರಕಟವಾಗಿರುವುದು ಚರ್ಚೆಗೆ ಕಾರಣವಾಗಿದೆ.

ಈ ಕುರಿತು ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ಪತ್ರ ಬರೆದಿರುವ ಜಂಟಿ ಕಾರ್ಯದರ್ಶಿ ಉಮಾ. ಕೆ. ಅವರು, ರಾಜ್ಯ ಸರ್ಕಾರದ ಅಧೀನದಲ್ಲಿರುವ ವಿವಿಧ ನಿಗಮಗಳು, ಮಂಡಳಿಗಳು ಹಾಗೂ ಪ್ರಾಧಿಕಾರಗಳ ಆಡಳಿತಾತ್ಮಕ ಕಾರ್ಯಚಟುವಟಿಕೆಗಳನ್ನು ಸುಗಮವಾಗಿ ನಿರ್ವಹಿಸುವ ಉದ್ದೇಶದಿಂದ ನೇಮಕಾತಿ ಪ್ರಕ್ರಿಯೆ ಕೈಗೊಳ್ಳುವಂತೆ ತಿಳಿಸಿದ್ದಾರೆ.

ವಿವಿಧ ನಿಗಮಗಳು, ಮಂಡಳಿಗಳು ಹಾಗೂ ಪ್ರಾಧಿಕಾರಗಳಿಗೆ ನಿರ್ದೇಶಕರು ಮತ್ತು ಸದಸ್ಯರನ್ನು ನೇಮಕ ಮಾಡಿ, ಕೂಡಲೇ ಸೂಕ್ತ ಆದೇಶ ಹೊರಡಿಸುವಂತೆ ಮುಖ್ಯ ಕಾರ್ಯದರ್ಶಿಗಳಿಗೆ ಸೂಚನೆ ನೀಡಿದ್ದಾರೆ.

ತುರುಕನಡೋಣಿ : ಶ್ರೀ ಮಾತಾ ಈದ್ಯಮ್ಮ ದೇವಿಯ ಮೂರ್ತಿ ಭವ್ಯ ಮೆರವಣಿಗೆ

ರಾಯಚೂರು :

ತಾಲೂಕಿನ ತುರುಕನಡೋಣಿ ಗ್ರಾಮ ದೇವತೆಯ ನೂತನ ಶ್ರೀಮಾತಾ ಈದ್ಯಮ್ಮ ದೇವಿಯ ಮೂರ್ತಿಯ ಭವ್ಯ ಮೆರವಣಿಗೆ ನಡೆಸಲಾಯಿತು.

ಇದೇ 14ರಿಂದ 16ರವರಗೆ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಲಾದ ದೇವಸ್ಥಾನ ಹಾಗೂ ನೂತನ ವಿಗ್ರಹ ಪ್ರತಿಷ್ಠಾಪನೆ, ಗೋಪುರ ಕಳಸಾರೋಹಣ ಹಿನ್ನೆಲೆಯಲ್ಲಿ ಇಂದು ಗ್ರಾಮಕ್ಕೆ ತರಲಾದ ಶ್ರೀ ಮಾತಾ ಈದ್ಯಮ್ಮ ದೇವಿಯ ಮೂರ್ತಿಯನ್ನು ಗ್ರಾಮದ ಮಹಿಳೆಯರು ಕುಂಬ ಕಳಸದೊಂದಿಗೆ ಶ್ರೀ ಮಾತೆಯನ್ನು ಸ್ವಾಗತಿಸಿ ಅದ್ದೂರಿ ಮೆರವಣಿಗೆಯಲ್ಲಿ ದೇವಸ್ಥಾನದ ವರೆಗೆ ಸಾಗಲಾಯಿತು.

ಡೊಳ್ಳು ಬಾಜಿ ಭಜಂತ್ರಿಯೊಂದಿಗೆ ಮಾತೆಯ ಮೂರ್ತಿಯ ಭವ್ಯ ಮೆರವಣಿಗೆ ನಡೆಯಿತು.



ನಾಳೆಯಿಂದ ಮೂರು ದಿನಗಳ ಕಾಲ ದೇವಸ್ಥಾನದ ಬಳಿ ಶ್ರೀಪವನಾಚಾರ್ಯ ಅವರ ನೇತೃತ್ವದಲ್ಲಿ ಹೋಮ ಹವನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ನ.16 ರಂದು ಮಟಮಾರಿ ಬಿಚ್ಚಾಲಿ ಮಹಾಸಂಸ್ಥಾನದ ಪೀಠಾಧಿಪತಿಗಳಾದ ಶ್ರೀ ವೀರಭದ್ರ ಶಿವಾಚಾರ್ಯ ಮಹಾಸ್ವಾಮೀಜಿಗಳು, ಸೋಮವಾರಪೇಟೆ ಹಿರೇಮಠದ ಪೀಠಾಧಿಪತಿಗಳಾದ ಶ್ರೀ ರಾಚೋಟಿ ವೀರಶಿವಾಚಾರ್ಯರ ಸಾನ್ನಿಧ್ಯದಲ್ಲಿ ನೂತನ ದೇವಸ್ಥಾನ ಹಾಗೂ ಶ್ರೀ ಮಾತೆಯ ನೂತನ ಮೂರ್ತಿ ಪ್ರತಿಷ್ಠಾಪನೆ,ಗೋಪುರ ಕಳಸಾರೋಹಣ ನೆರವೇರಿಸಲಾಗುತ್ತದೆ.

ಈ ಮೆರವಣಿಗೆಯಲ್ಲಿ ಗ್ರಾಮದ ಹಿರಿಯರು, ಮುಖಂಡರು, ಮಹಿಳೆಯರು, ಯುವಕ ಯುವತಿಯರು ಮಕ್ಕಳು ಉತ್ಸಾಹದಿಂದ ಪಾಲ್ಗೊಂಡಿದ್ದರು.

ಬರದಿಂದ ಬೆಳೆ ಕಳೆದುಕೊಂಡ ರೈತರಿಗೆ 5,000 ಪರಿಹಾರ: ಚನ್ನಾರೆಡ್ಡಿ ಪಾಟೀಲ



ಯಾದಗಿರಿ: ಬರದಿಂದ ಬೆಳೆ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿರುವ ರೈತರ ಬದುಕಿಗೆ ಆಸರೆಯಾಗಲು ರಾಜ್ಯ ಸರ್ಕಾರ ಬದ್ಧವಾಗಿದೆ. ರೈತರ ಕಷ್ಟಕ್ಕೆ ಸ್ಪಂದಿಸಿ ಎನ್ಡಿಆರ್ಎಫ್ ನಿಯಮಗಳ ಅನ್ವಯ ಗರಿಷ್ಠ ಎರಡು ಹೆಕ್ಟೇರ್ವರೆಗೆ ಪ್ರತಿ ರೈತರಿಗೆ 5,000 ಪರಿಹಾರ ನೀಡಲು ತೀರ್ಮಾನಿಸಿ ಮೊದಲ ಕಂತಿನ 2,500 ಬಿಡುಗಡೆಗೆ ಕ್ರಮ ವಹಿಸಲಾಗಿದೆ ಎಂದು ಶಾಸಕ ಚನ್ನಾರೆಡ್ಡಿ ಪಾಟೀಲ ತುನ್ನೂರು ಹೇಳಿದ್ದಾರೆ. ಪರಿಹಾರದ ಎರಡನೇ ಕಂತಿನ ಹಣವು ಮೂರು ವಾರದೊಳಗೆ ಬಿಡುಗಡೆ ಆಗಲಿದೆ. ಕಷ್ಟದ ಸಮಯದಲ್ಲಿ ರೈತರ ಬೆನ್ನಿಗೆ ನಿಂತು, ಧೈರ್ಯ ಮತ್ತು ಭರವಸೆ ತುಂಬುವ ಕೆಲಸವನ್ನು ರಾಜ್ಯ ಸರ್ಕಾರ ಮಾಡುತ್ತಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ .ಮೊದಲ ಹಂತ 'ದಲ್ಲಿ ತಲಾ 2,500 ಪರಿಹಾರ ನೀಡಲು ನಿರ್ಧರಿಸಿದ್ದು, ಇದಕ್ಕಾಗಿ 1,250 ಕೋಟಿ ಬಿಡುಗಡೆ ಮಾಡಲಾಗಿದೆ ಎಂದಿದ್ದಾರೆ.

ವೀರ ವನಿತೆ ಒನಕೆ ಓಬವ್ವ ಅವರ ತ್ಯಾಗ, ಧೈರ್ಯ ಮಹಿಳೆಯರಿಗೆ ಸ್ಫೂರ್ತಿ: ಅಲ್ಲಮಪ್ರಭು ಪಾಟೀಲ್





ಕಲಬುರಗಿ,ನ.11 ಒನಕೆ ಓಬವ್ವನ ಐತಿಹಾಸಿಕ ಸಾಹಸ ಮತ್ತು ದೇಶಪ್ರೇಮವನ್ನು ಸ್ಮರಿಸಿ. ಸಾಮಾನ್ಯ ಕುಟುಂಬದಲ್ಲಿ ಜನಿಸಿದರೂ, ಚಿತ್ರದುರ್ಗದ ಕೋಟೆಯ ಮೇಲೆ ಹೈದರಾಲಿಯ ಸೈನಿಕರು ರಹಸ್ಯವಾಗಿ ನುಸುಳಿದಾಗ ಮನೆಯಲ್ಲಿದ್ದ ಒನಕೆಯನ್ನೇ ಆಯುಧವನ್ನಾಗಿ ಬಳಸಿ ಎದೆಗುಂದದೆ ಮಾತೃಭೂಮಿಯ ರಕ್ಷಣೆಗಾಗಿ ಹೋರಾಡಿದ ಓಬವ್ವಳ ಸಾಹಸ ಆಕೆಯ ತ್ಯಾಗ ಅನನ್ಯವಾದುದು ಎಂದು ದಕ್ಷಿಣ ಮತಕ್ಷೇತ್ರದ ಶಾಸಕರಾದ ಅಲ್ಲಂ ಪ್ರಭು ಪಾಟೀಲ ಅವರು ಶ್ಲಾಘೀಸಿದರು.

ಬುಧವಾರ, ನಗರದ ಸರಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನ ವಿಜ್ಞಾನ ಕಟ್ಟಡದ ಸಭಾಂಗಣದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾನಗರ ಪಾಲಿಕೆ ಹಾಗೂ ಜಿಲ್ಲಾ ಪಂಚಾಯತ್ ಕಲಬುರಗಿ ಇವರ ಸಂಯುಕ್ತಾಶ್ರಯದಲ್ಲಿ ಆಯೋಜಿಸಲಾದ ವೀರವನಿತೆ ಒನಕೆ ಓಬವ್ವ ಜಯಂತಿ ಕಾರ್ಯಕ್ರಮದಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಸಸಿಗೆ ನೀರುಣಿಸುವ ಮೂಲಕ ಉದ್ಘಾಟಿಸಿ ಮಾತನಾಡಿದರು.

ಇಂದಿನ ಮಹಿಳೆಯರ ಸುರಕ್ಷತೆಗೆ ಒನಕೆ ಓಬವ್ವಳ ಧೈರ್ಯ, ಸ್ವಾಭಿಮಾನ ಮತ್ತು ತ್ಯಾಗದ ಮನೋಭಾವವು ಪ್ರತಿಯೊಬ್ಬ ಮಹಿಳೆಯು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು, ದೇಶದ ಸಂಸ್ಕೃತಿ ಹಾಗೂ ಸುರಕ್ಷತೆಗೆ ಬದ್ಧರಾಗುವಂತೆ ಹಾಗೂ ಆತ್ಮಸ್ಥೈರ್ಯ ತುಂಬಲು ದೊಡ್ಡ ಸ್ಫೂರ್ತಿಯಾಗಲಿ ಎಂದು ಹೇಳಿದರು.

ಮುಂದಿನ ದಿನಗಳಲ್ಲಿ ಒನಕೆ ಓಬವ್ವಳ ಇತಿಹಾಸ ಮತ್ತು ಆದರ್ಶಗಳನ್ನು ಯುವ ಪೀಳಿಗೆಗೆ ಮುಂದಿನ ಪೀಳಿಗೆಗೆ ಆಕೆಯ ಆದರ್ಶ ತಲುಪಿಸಲು ಕಾಲೇಜು ವಿದ್ಯಾರ್ಥಿಗಳಿಗೆ ಪ್ರಬಂಧ ಹಾಗೂ ಭಾಷಣ ಸ್ಪರ್ಧೆಗಳನ್ನು ಆಯೋಜಿಸುವುದಾಗಿ ಕರೆ ನೀಡಿದರು.

ಜಿಲ್ಲಾಧಿಕಾರಿ ಕಚೇರಿ ತಹಸೀಲ್ದಾರ್ ಶಿವಪ್ರಭು ಹಿರೇಮಠ ಅವರು ವೀರ ವನತೆಯರ ಇತಿಹಾಸ, ಅವರ ಶೌರ್ಯ ಮತ್ತು ಸಮಯಪ್ರಜ್ಞೆಯನ್ನು ನೆನೆಯುವುದರ ಜೊತೆಗೆ, ಅಂತಹ ಮಹಾನ್ ವ್ಯಕ್ತಿಗಳ ಜಯಂತಿಗಳನ್ನು ಆಚರಿಸುವುದರ ಪ್ರಾಮುಖ್ಯತೆಯನ್ನು ತಿಳಿಸಿದರು.

ಧರ್ಮ ಮತ್ತು ಸಮಾಜದ ಉದ್ದೇಶ ಮನು?ನನ್ನು ಸನ್ಮಾರ್ಗದಲ್ಲಿ ನಡೆಸುವುದು ಮತ್ತು ಸಮಾಜದ ಸುಧಾರಣೆಗೆ ಶ್ರಮಿಸುವುದೇ ಆಗಿದೆ. ಪ್ರತಿಯೊಬ್ಬರೂ ತಮ್ಮ ಆಚಾರ-ವಿಚಾರಗಳಲ್ಲಿ ಬದಲಾವಣೆ ತಂದುಕೊಳ್ಳಬೇಕು ಎಂದರು.

ಪ್ರಕೃತಿಯ ಸಮಾನತೆ ಮನು?ನ ಹುಟ್ಟಿನ ಪ್ರಕ್ರಿಯೆಯೂ ಎಲ್ಲರಿಗೂ ಒಂದೇ ಆಗಿದೆ. ನಿಜವಾದ ಶಿಕ್ಷಣವೆಂದರೆ ಅಹಂಕಾರವನ್ನು ತೊಡೆದುಹಾಕುವುದು ಹಾಗೂ ದೇಶದ ಕಾನೂನು, ಸಂವಿಧಾನ ಮತ್ತು ಸಂಚಾರ ನಿಯಮಗಳನ್ನು ಗೌರವಿಸಿ ಪಾಲಿಸುವುದಾಗಿದೆ.

ಹಿರಿಯ ಉಪನ್ಯಾಸಕರು ಡಾ.ಪುಟ್ಟಮಣಿ ದೇವಿದಾಸ್ ಅವರು ಉಪನ್ಯಾಸ ನೀಡಿ ವೀರಾವೇಶ ಮತ್ತು ಸಮಯಪ್ರಜ್ಞೆ

ಒನಕೆ ಓಬವ್ವ ಅವರು ಸೈನಿಕ ತರಬೇತಿ ಅಥವಾ ರಾಜವಂಶದ ಹಿನ್ನೆಲೆ ಇಲ್ಲದಿದ್ದರೂ, ತಮ್ಮ ಕೋಟೆಗೆ ಎದುರಾದ ಅಪಾಯವನ್ನು ಕಂಡ ಕ್ಷಣದಲ್ಲಿ ಅವರು ತೋರಿದ ಅವರು ತೋರಿದ ಸಮಯಪ್ರಜ್ಞೆ, ದೇಶಪ್ರೇಮ ಹಾಗೂ ಸ್ವಾಮಿನಿಷ್ಠೆ ಇಡೀ ರಾಜ್ಯವನ್ನು ರಕ್ಷಿಸಿ ಅವರನ್ನು ಇತಿಹಾಸದಲ್ಲಿ ಜಗತ್ಪಸಿದ್ಧರನ್ನಾಗಿ ಮಾಡಿದೆ ಎಂದರು.

ಇಂತಹ ಮಹನೀಯರ ಜನ್ಮ ದಿನಾಚರಣೆಗಳನ್ನು ಕೇವಲ ಆಚರಣೆಗಾಗಿ ಮಾಡದೆ, ಅದು ಆತ್ಮಾವಲೋಕನದ ದಿನವಾಗಬೇಕು ಮತ್ತು ಅವರ ತ್ಯಾಗ-ಬಲಿದಾನಗಳ ಬಗ್ಗೆ ಸಮಾಜದಲ್ಲಿ ಅರಿವು ಮೂಡಿಸಲು ಪ್ರೇರಣೆಯಾಗಬೇಕು ಎಂದು ಪ್ರತಿಪಾದಿಸಿದರು.

1721ರಲ್ಲಿ ಗುಡಿಕೋಟೆಯಲ್ಲಿ ಜನಿಸಿ, 1769ರಲ್ಲಿ ವೀರಮರಣ ಹೊಂದಿದರೆನ್ನಲಾದ ಓಬವ್ವ ಅವರು, ಚಿತ್ರದುರ್ಗದ ಮದಕರಿ ನಾಯಕರ ಆಡಳಿತಾವಧಿಯಲ್ಲಿ ಹೈದರಾಲಿ ತನ್ನ ಸ್ವಾರ್ಥಕ್ಕಾಗಿ ಚಿತ್ರದುರ್ಗದ ಕೋಟೆಯ ಮೇಲೆ ಆಕ್ರಮಣ ಮಾಡಿದಾಗ, ಕೋಟೆಯ ರಹಸ್ಯ ಕಿಂಡಿಯ ಮೂಲಕ ಸೈನಿಕರು ನುಗ್ಗುತ್ತಿರುವುದನ್ನು ಗಮನಿಸಿದ ಓಬವ್ವ, ಯಾವುದೇ ಪೂರ್ವಯೋಜನೆ ಇಲ್ಲದಿದ್ದರೂ ಕ್ಷಣಾರ್ಧದಲ್ಲಿ ಧೈರ್ಯ ಮಾಡಿ ಒನಕೆಯಿಂದಲೇ ಶತ್ರುಗಳನ್ನು ಹತ್ಯೆಗೈದರು.

ಸುಮಾರು 67 ಪಾಳೇಪಟ್ಟುಗಳಿದ್ದ ಆ ಕಾಲದಲ್ಲಿ ಚಿತ್ರದುರ್ಗ, ಹರಪನಹಳ್ಳಿ ಮತ್ತು ರಾಯದುರ್ಗದಂತಹ ಪಾಳೇಗಾರರು ಜನಾನುರಾಗಿಗಳಾಗಿ ಆಡಳಿತ ನಡೆಸುತ್ತಿದ್ದರು.

ಹೈದರಾಲಿ ಸೋಲಿನ ಬಳಿಕ ಓಬವ್ವ ಅವರ ಮಗ ಆನೆಪ್ಪ ಹಾಗೂ ಕುಟುಂಬದ ಇತಿಹಾಸ ಮತ್ತು ತದನಂತರದ ಘಟನೆಗಳನ್ನು ಉಪನ್ಯಾಸದಲ್ಲಿ ಸ್ಮರಿಸಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಉಪನಿರ್ದೇಶಕಿ ಜಗದೀಶ್ವರಿ.ಅ.ನಾಸಿ ಅವರು ಸ್ವಾಗತಿಸಿದರು.

ಈ ಸಂದರ್ಭದಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಜಿಲ್ಲಾ ಅಧ್ಯಕ್ಷರಾದ ಶ್ರೀಮತಿ ಚಂದ್ರಿಕಾ ಪರಮೇಶ್ವರ್, ಕರ್ನಾಟಕ ರಾಜ್ಯ ಛಲವಾದಿ ಮಹಾಸಭಾ ಜಿಲ್ಲಾ ಉಪಾಧ್ಯಕ್ಷರು ಸಂಪತ್ ಕುಮಾರ ವಳಕೆರಿ,ಸರಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರು ಪ್ರಕಾಶ ಮೊರಗೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸದಸ್ಯ ಸುರೇಶ ಬಡಿಗೇರ, ಮಹದೇವ ಮೊಘಾ ಕರ್ನಾಟಕ ರಾಜ್ಯ ಸರ್ಕಾರ ಮಹಿಳಾ ಅಧ್ಯಕ್ಷರು ನಂದಿನಿ ಸನಬಾಳ, ಸರಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನ ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.,ಕನಾ೯ಟಕ ರಾಜ್ಯ ಸರ್ಕಾರ ಮಹಿಳಾ ಅಧ್ಯಕ್ಷರು ನಂದಿನಿ ಸನಬಾಳ, ಸರಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನ ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಉಪನ್ಯಾಸಕಿ ಸವಿತಾ ನಾಸಿ ನಿರೂಪಿಸಿದರು.

ಯೇಸುವಿನ ತತ್ವಾದರ್ಶಗಳನ್ನು ಪ್ರತಿಯೊಬ್ಬರು ಪಾಲಿಸಬೇಕು: ಸಚಿವ ಈಶ್ವರ ಖಂಡ್ರೆ



ಭಾಲ್ಕಿ: 'ಅಂದಿನ ಸಮಾಜದಲ್ಲಿ ತಾಂಡವಾಡುತ್ತಿದ್ದ ಅಸಮಾನತೆ, ಅಸ್ಪೃಶ್ಯತೆ, ಅನ್ಯಾಯ, ದೌರ್ಜನ್ಯವನ್ನು ಹೊಡೆದೋಡಿಸಲು ಶ್ರಮಿಸಿದ್ದ ಯೇಸುವಿನ ತತ್ವಾದರ್ಶಗಳನ್ನು ಪ್ರತಿಯೊಬ್ಬರು ಪಾಲಿಸಬೇಕು' ಎಂದು ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಹೇಳಿದರು.

ನಗರದ ಬಾಲಯೇಸು ಪುಣ್ಯಕ್ಷೇತ್ರದಲ್ಲಿ ನಡೆಯುತ್ತಿರುವ ವಾರ್ಷಿಕ ಜಾತ್ರಾ ಮಹೋತ್ಸವದ ಸಮಾರೋಪದಲ್ಲಿ ಮಾತನಾಡಿ, 'ಸಮ ಸಮಾಜ ನಿರ್ಮಾಣಕ್ಕಾಗಿ ದಯೆ, ಪ್ರಾಮಾಣಿಕತೆ, ಕ್ಷಮಾದಾನ, ಪರೋಪಕಾರ, ಸೇವಾ ಮನೋಭಾವ ಸೇರಿದಂತೆ ಇತರ ಆದರ್ಶ ಗುಣಗಳನ್ನು ಅವರು ಜನರ ಹೃದಯದಲ್ಲಿ ಬಿತ್ತಲು ಅವಿರತವಾಗಿ ಪ್ರಯತ್ನಿಸಿದ್ದರು' ಎಂದರು.

'ಯೇಸುಕ್ರಿಸ್ತರ ಜೀವನ ಮತ್ತು ಸಂದೇಶ ಹಿಂದೆ ಎಷ್ಟು ಪ್ರಸ್ತುತವಾಗಿತ್ತೋ, ಇಂದು ಮತ್ತು ಮುಂದೆಯೂ ಅಷ್ಟೇ ಪ್ರಸ್ತುತವಾಗಿರುತ್ತದೆ. ನವ ಕರ್ನಾಟಕ, ಭಾರತ ನಿರ್ಮಾಣದಲ್ಲಿ ಕ್ರೈಸ್ತ ಸಮುದಾಯದ ಪಾತ್ರ ಹಿರಿದಾಗಿದೆ' ಎಂದು ಹೇಳಿದರು.

ಕಲಬುರಗಿ ಧರ್ಮಕ್ಷೇತ್ರದ ಧರ್ಮಾಧ್ಯಕ್ಷ ರಾಬರ್ಟ್ ಮೈಕಲ್ ಮಿರಾಂದ್ ಮಾತನಾಡಿದರು

. ಮೂರು ದಿನಗಳ ಜಾತ್ರಾ ಮಹೋತ್ಸವದ ಅಂಗವಾಗಿ ನಡೆದ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಸಾವಿರಾರು ಭಕ್ತರು ಭಾಗವಹಿಸಿ ಬಾಲಯೇಸುವಿನ ದರ್ಶನ ಪಡೆದರು.ಫಾದರ್ ಸಂತೋಷ್ ಬಾಪು, ಫಾದರ್ ಸ್ಟೇನಿ, ಫಾದರ್ ಕ್ಲಾರಿ ಡಿಸೋಜಾ, ಕಾಂಗ್ರೆಸ್ ಮುಖಂಡ ಸಂಜಯ್ ಜಾಗೀ ರದಾರ್, ಶಿವರಾಜ ಹಾಸನ ಕರ್ ಸೇರಿದಂತೆ ಇತರರು ಇದ್ದರು.

ಹಾಸನ ಡಿಸಿ ಕಚೇರಿಯಲ್ಲಿ ಭ್ರಷ್ಟಾಚಾರ : ರಾಜ್ಯ ಸರ್ಕಾರದ ಮುಖ್ಯಕಾರ್ಯದರ್ಶಿಗೆ ಜೆಡಿಎಸ್ ದೂರು

ಬೆಂಗಳೂರು, ನ.12- ಹಾಸನ ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದಿದೆ ಎನ್ನಲಾದ ಕೋಟ್ಯಂತರ ರೂಪಾಯಿಗಳ ಹಣಕಾಸಿನ ವ್ಯವಹಾರ ಹಾಗೂ ಭ್ರಷ್ಟಾಚಾರದ ಗಂಭೀರ ಆರೋಪಗಳ ಕುರಿತು ಉನ್ನತ ಮಟ್ಟದ ತನಿಖೆ ನಡೆಸುವಂತೆ ಆಗ್ರಹಿಸಿ ಜೆಡಿಎಸ್ ಇಂದು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ದೂರು ಸಲ್ಲಿಸಿದೆ.

ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸಿ.ಬಿ.ಸುರೇಶ್ ಬಾಬು, ವಿಧಾನ ಪರಿಷತ್ತಿನ ಜೆಡಿಎಸ್ ಉಪ ನಾಯಕ ಟಿ.ಎ.ಶರವಣ ಮತ್ತು ಶಾಸಕ ಭೀಮನಗೌಡ ಬಸನಗೌಡ ಪಾಟೀಲ್ ಅವರನ್ನೊಳಗೊಂಡ ಜೆಡಿಎಸ್ ನಿಯೋಗ ವಿಧಾನಸೌಧದಲ್ಲಿ ಇಂದು ಮಧ್ಯಾಹ್ನ ಮುಖ್ಯಕಾರ್ಯದರ್ಶಿ ಶಾಲಿನಿ ರಜನೀಸ್ ಅವರನ್ನು ಭೇಟಿ ಮಾಡಿ ದೂರು ಸಲ್ಲಿಸಿದೆ.

ಆರೋಪದ ಗಂಭೀರತೆ, ಸಾರ್ವಜನಿಕವಾಗಿ ಬಿಡುಗಡೆಯಾಗಿರುವ ಸಂಭಾಷಣೆಗಳು ಹಾಗೂ ಸಂಬಂಧಪಟ್ಟ ಅಧಿಕಾರಿಗಳ ಪಾತ್ರದ ಕುರಿತು ಉನ್ನತ ಮಟ್ಟದ ತನಿಖೆ ನಡೆಸಿ



ತಪ್ಪಿತಸ್ಥರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ದೂರಿನಲ್ಲಿ ಒತ್ತಾಯಿಸಲಾಗಿದೆ.

ಸಾರ್ವಜನಿಕವಾಗಿ ಬಿಡುಗಡೆಯಾಗಿರುವ ವಾಟ್ಸಾಪ್ ಸಂಭಾಷಣೆಗಳ ಸ್ಕ್ರೀನ್ಶಾಟ್ಗಳಲ್ಲಿ ಹಾಸನ

ಜಿಲ್ಲಾಧಿಕಾರಿ ಉಪವಿಭಾಗಾಧಿಕಾರಿ , ಅಪರ ಜಿಲ್ಲಾಧಿಕಾರಿ, ತಹಶೀಲ್ದಾರ್ ಹಾಗೂ ಜಿಲ್ಲಾಧಿಕಾರಿಗಳ ಆಪ್ತ ಸಹಾಯಕ ಸೇರಿದಂತೆ ವಿವಿಧ ಅಧಿಕಾರಿಗಳ ಹುದ್ದೆಗಳನ್ನು ಉಲ್ಲೇಖಿಸಿ ಕೋಟ್ಯಂತರ ರೂಪಾಯಿಗಳ ಹಣಕಾಸಿನ ವ್ಯವಹಾರ, ಹಣದ ಹಂಚಿಕೆ ಮತ್ತು ಹೊಂದಾಣಿಕೆ ಕುರಿತು ಗಂಭೀರ ಆರೋಪಗಳು ಕೇಳಿಬಂದಿವೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ವಿಶೇಷವಾಗಿ, ಜಿಲ್ಲಾಧಿಕಾರಿಗಳಿಗೆ ಸಂಬಂಧಿಸಿದಂತೆ ಲಕ್ಷಾಂತರ ರೂ.ಗಳು ಹಾಗೂ ಉಪವಿಭಾಗಾಧಿಕಾರಿಗಳಿಗೆ ಸಂಬಂಧಿಸಿದಂತೆ ಲಕ್ಷಾಂತರ ಮೊತ್ತದ ಪ್ರಸ್ತಾಪಗಳು ಸಂಭಾಷಣೆಗಳಲ್ಲಿ ಕಂಡುಬಂದಿವೆ. ಅಲ್ಲದೆ ಸಕಲೇಶಪುರದ ಮೂರು ಕ್ರಷರ್ಗಳ ಕಡತಗಳ ಅನುಮೋದನೆ ಮತ್ತು ವಿಲೇವಾರಿಗೆ ಸಂಬಂಧಿಸಿದಂತೆ ಹಣದ ವ್ಯವಹಾರ ನಡೆದಿರುವ ಆರೋಪಗಳ ಬಗ್ಗೆಯೂ ಸಮಗ್ರ ತನಿಖೆಯಾಗಬೇಕೆಂದು ನಿಯೋಗ ಮುಖ್ಯ ಕಾರ್ಯದರ್ಶಿ ಅವರನ್ನು ಒತ್ತಾಯಿಸಿದೆ.

ಈ ಹಿನ್ನೆಲೆಯಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಮತ್ತು ಮಧ್ಯವರ್ತಿಗಳ ಪಾತ್ರ, ಹಣಕಾಸಿನ ವಹಿವಾಟುಗಳ ಮೂಲ, ಬ್ಯಾಂಕ್ ಖಾತೆಗಳು, ಯುಪಿಐ ವ್ಯವಹಾರಗಳು ಹಾಗೂ ಇತರ ಹಣಕಾಸಿನ ದಾಖಲೆಗಳನ್ನು ಪರಿಶೀಲಿಸಬೇಕು. ಸಾರ್ವಜನಿಕವಾಗಿ ಬಿಡುಗಡೆಯಾಗಿರುವ ವಾಟ್ಸಾಪ್ ಸಂಭಾಷಣೆಗಳ ಸತ್ಯಾಸತ್ಯತೆಯನ್ನು ಮೂಲ ಮೊಬೈಲ್ ಸಾಧನಗಳು, ಡಿಜಿಟಲ್ ದಾಖಲೆಗಳು ಮತ್ತು ವಿಧಿವಿಜ್ಞಾನ ಪರೀಕ್ಷೆಯ ಮೂಲಕ ದೃಢಪಡಿಸಬೇಕು ಎಂದು ಮನವಿಯಲ್ಲಿ ಒತ್ತಾಯಿಸಲಾಗಿದೆ. ಪ್ರಕರಣವನ್ನು ಜಿಲ್ಲಾಡಳಿತದ ಆಂತರಿಕ ತನಿಖೆಗೆ ಸೀಮಿತಗೊಳಿಸದೆ, ಲೋಕಾಯುಕ್ತ ಅಥವಾ ಸಮರ್ಥ ಸ್ವತಂತ್ರ ತನಿಖಾ ಸಂಸ್ಥೆಯ ಮೂಲಕ ಉನ್ನತ ಮಟ್ಟದ ತನಿಖೆ ನಡೆಸಬೇಕು ಎಂದು ಆಗ್ರಹಿಸಲಾಗಿದೆ.

ಪಂಚಾಯಿತಿ ಕಟ್ಟಡದಿಂದ ಜಿಗಿದು ಆತ್ಮಹತ್ಯೆಗೆ ಯತ್ನ

ಹುಮನಾಬಾದ್: ತಾಲ್ಲೂಕಿನ ನಂದಗಾಂವ ಗ್ರಾಮ ಪಂಚಾಯಿತಿ ಕಟ್ಟದ ಮೇಲಿಂದ ವ್ಯಕ್ತಿಯೊಬ್ಬರು ಜಿಗಿದು ಆತ್ಮಹತ್ಯೆಗೆ ಯತ್ನಿಸಿದ ಘಟನೆ ಭಾನುವಾರ ನಡೆದಿದೆ.

ಗ್ರಾಮದ ನಿವಾಸಿ ಆನಂದ ಎಂಬುವವರು ಆತ್ಮಹತ್ಯೆಗೆ ಯತ್ನಿಸಿದ ವ್ಯಕ್ತಿ ಎಂದು ತಿಳಿದುಬಂದಿದೆ. ಕಟ್ಟಡದ ಮೇಲೇರಿ ಆತ್ಮಹತ್ಯೆ ಮಾಡಿಕೊಳ್ಳಲು ಮುಂದಾಗಿದ್ದಾರೆ. ಇದನ್ನು ಗಮನಿಸಿದ ಗ್ರಾಮಸ್ಥರು ತಕ್ಷಣ ಸ್ಥಳಕ್ಕೆ ಧಾವಿಸಿ ಅವರನ್ನು ಕೆಳಗಿಳಿಸಲು ಪ್ರಯತ್ನಿಸಿದ್ದಾರೆ.

ಈ ವೇಳೆ ಆನಂದ ಅವರು ಕಟ್ಟದ ಮೇಲಿಂದ ಜಿಗಿದಿದ್ದ ಹಿನ್ನೆಲೆಯಲ್ಲಿ ಗಂಭೀರ ಗಾಯಗೊಂಡಿದ್ದಾರೆ ಎಂದು ತಿಳಿದು ಬಂದಿದೆ. ಯಾವ ಕಾರಣಕ್ಕಾಗಿ ಗ್ರಾಮ ಪಂಚಾಯಿತಿ ಕಟ್ಟದಿಂದ ಜಿಗಿಯಲು ಯತ್ನಿಸಿದ್ದಾರೆ ಎಂಬ ನಿಖರ ಮಾಹಿತಿ ಲಭ್ಯವಾಗಿಲ್ಲ.

ದೀಪಾವಳಿ ಪ್ರಯುಕ್ತ ಅಂಗಡಿ ಪೂಜೆಗಳು ನಡೆಯುತ್ತಿದ್ದ ಸಂದರ್ಭದಲ್ಲಿ ಪಟಾಕಿ ಕಿಡಿ ಸಿಡಿದು ಭಾರಿ ಅಗ್ನಿ ಅವಘಡ



ಕೆಂಭಾವಿ: ಪಟ್ಟಣದಲ್ಲಿ ದೀಪಾವಳಿ ಪ್ರಯುಕ್ತ ಅಂಗಡಿ ಪೂಜೆಗಳು ನಡೆಯುತ್ತಿದ್ದ ಸಂದರ್ಭದಲ್ಲಿ ಪಟಾಕಿ ಕಿಡಿ ಸಿಡಿದು ಭಾರಿ ಅಗ್ನಿ ಅವಘಡ ಸಂಭವಿಸಿದೆ.

ಗೋದಾಮಿನಲ್ಲಿ ಶೇಖರಿಸಿಟ್ಟಿದ್ದ ಸುಮಾರು '

250 ಕ್ವಿಂಟಾಲ್ಗೂ ಹೆಚ್ಚು ಹತ್ತಿ ಸಂಪೂರ್ಣವಾಗಿ ಸುಟ್ಟು ಭಸ್ಮವಾಗಿದೆ.

ಬಾಬುಗೌಡ ಮಾಲೀಪಾಟೀಲ ಎಂಬ ರೈತನಿಗೆ ಸೇರಿದ ಹತ್ತಿ ಇದಾಗಿತ್ತು.

ಸ್ಥಳಕ್ಕೆ ಅಗ್ನಿಶಾಮಕ ದಳ ಆಗಮಿಸಿ ಬೆಂಕಿ ನಂದಿಸುವಷ್ಟರಲ್ಲಿ ಬಹುತೇಕ ಹತ್ತಿ ಸುಟ್ಟು ಕರಕಲಾಗಿತ್ತು. ಬರಗಾಲದ ನಡುವೆಯೂ ರೈತ ಕಷ್ಟಪಟ್ಟು ಬೆಳೆದಿದ್ದ ಹತ್ತಿ ಅಗ್ನಿ ದುರಂತಕ್ಕೆ ಆಹುತಿಯಾಗಿದ್ದು, ಸರ್ಕಾರ ಸೂಕ್ತ ಪರಿಹಾರ ನೀಡಬೇಕೆಂದು ರೈತ ಮುಖಂಡರು ಒತ್ತಾಯಿಸಿದ್ದಾರೆ.

ಹಂಪಿ ಸ್ಮಾರಕಗಳ ಸಂರಕ್ಷಣೆಗೆ ಕೇಂದ್ರದಿಂದ 38 ಕೋಟಿ ಅನುದಾನ

ಬೆಂಗಳೂರು: ವಿಶ್ವಪ್ರಸಿದ್ಧ ಹಂಪಿಯ ಐತಿಹಾಸಿಕ ಸ್ಮಾರಕಗಳ ಸಂರಕ್ಷಣೆ ಮತ್ತು ಪುನರುಜ್ಜೀವನಕ್ಕೆ ಕೇಂದ್ರ ಸರ್ಕಾರ ?38 ಕೋಟಿ ವೆಚ್ಚದ ಸಮಗ್ರ ಯೋಜನೆ ರೂಪಿಸಿದೆ ಎಂದು ತಿಳಿದುಬಂದಿದೆ.

ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಗಿದ್ದ ಹಂಪಿಯ ಪ್ರಮುಖ ದೇವಾಲಯಗಳು, ಮಂಟಪಗಳು ಹಾಗೂ ಐತಿಹಾಸಿಕ ಕಟ್ಟಡಗಳನ್ನು ಸಂರಕ್ಷಿಸುವುದು ಈ ಯೋಜನೆಯ ಉದ್ದೇಶವಾಗಿದೆ. ಕೇಂದ್ರ ಸಂಸ್ಕೃತಿ ಸಚಿವಾಲಯದ ವತಿಯಿಂದ ಈ ಯೋಜನೆ ಕೈಗೆತ್ತಿಕೊಳ್ಳಲಾಗುತ್ತಿದೆ.

ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (ಎಚ್ಎಎಲ್) ನೀಡುವ ಸಿಎಸ್ಆರ್ ಅನುದಾನ ಹಾಗೂ ಸಂಸದರ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿ (ಎಂಪಿಎಲ್ಎಡಿಎಸ್) ಮೂಲಕ ಯೋಜನೆಗೆ ಹಣ ಒದಗಿಸಲಾಗುತ್ತದೆ.

ರಾಷ್ಟ್ರೀಯ ಸಂಸ್ಕೃತಿ ನಿಧಿ (ಎನ್ಸಿಎಫ್) ಅಡಿಯಲ್ಲಿ ಈ ಯೋಜನೆ ಜಾರಿಯಾಗಲಿದ್ದು, ಒಟ್ಟು ?38 ಕೋಟಿ ಅನುದಾನ ಲಭ್ಯವಾಗಲಿದೆ. ಇದರಲ್ಲಿ ಸುಮಾರು ?19 ಕೋಟಿ ಸಂಸದರ ನಿಧಿಯಿಂದ ಬರಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಯೋಜನೆಯ ಅನುಷ್ಠಾನಕ್ಕೂ ಮುನ್ನ ಪಾರಂಪರಿಕ ಸ್ಮಾರಕಗಳ ಸಂರಕ್ಷಣೆಯಲ್ಲಿ ಪರಿಣತಿ ಹೊಂದಿರುವ ವಾಸ್ತುಶಿಲ್ಪ ತಜ್ಞರನ್ನು ಸಚಿವಾಲಯ ನೇಮಿಸಲಿದೆ. ಅವರು ಆಯ್ದ ಸ್ಮಾರಕಗಳ ಸ್ಥಿತಿಗತಿ ಪರಿಶೀಲನೆ, ಹಾನಿಯ ಮೌಲ್ಯಮಾಪನ, ಸಂರಕ್ಷಣಾ ಕಾರ್ಯಗಳ ಯೋಜನೆ ಹಾಗೂ ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಲಿದ್ದಾರೆ. ಯಾವ ಸ್ಮಾರಕದಲ್ಲಿ ಯಾವ ರೀತಿಯ ಕೆಲಸ ಮಾಡಬೇಕು, ಎಷ್ಟು ಪ್ರಮಾಣದಲ್ಲಿ ಕಾಮಗಾರಿ



ಕೈಗೊಳ್ಳಬೇಕು ಮತ್ತು ಯಾವ ಅನುದಾನದಲ್ಲಿ ಯಾವ ಕೆಲಸ ನಡೆಯಬೇಕು ಎಂಬುದನ್ನು ಸ್ಪಷ್ಟವಾಗಿ ಗುರುತಿಸುವುದು ಈ ಪ್ರಕ್ರಿಯೆಯ ಉದ್ದೇಶವಾಗಿದೆ.

ಯಾವ ಸ್ಮಾರಕಗಳಿಗೆ ಸಿಗಲಿದೆ ಕಾಯಕಲ್ಪ?

ಈ ಯೋಜನೆಯಡಿ ಪ್ರಮುಖವಾಗಿ ಈ ಸ್ಮಾರಕಗಳ ಸಂರಕ್ಷಣೆಗೆ ಆದ್ಯತೆ ನೀಡಲಾಗಿದೆ.

- ವಿರೂಪಾಕ್ಷ ದೇವಾಲಯ: ದೇವಾಲಯದ ಉತ್ತರ ಮತ್ತು ದಕ್ಷಿಣ ಭಾಗದಲ್ಲಿರುವ ಬಜಾರ್ಗಳ ಸಂಪೂರ್ಣ ಉದ್ದದ ಸಂರಕ್ಷಣೆ.
- ವಿಜಯ ವಿಠ್ಠಲ ದೇವಾಲಯದ ಸಮೀಪ: ಶ್ರೀ ಭಾಷ್ಯಕಾರ ಗುಡಿಯ ಪಶ್ಚಿಮ ಭಾಗದಲ್ಲಿರುವ ಕುಸಿದುಬಿದ್ದ ಮಂಟಪದ ಪುನರುಜ್ಜೀವನ.
- ಹೇಮಕೂಟ ಬೆಟ್ಟ: ಇಲ್ಲಿರುವ ಜೈನ ದೇವಾಲಯಗಳ ಸಂರಕ್ಷಣೆ.
- ಸಿಂಗನಾಯಕನಹಳ್ಳಿ: ಇಲ್ಲಿರುವ ಸರಸ್ವತಿ ದೇವಾಲಯದ ಸಂರಕ್ಷಣಾ ಕಾರ್ಯಗಳೂ ಯೋಜನೆಯ ಭಾಗವಾಗಿವೆ.

ಈ ಕಾಮಗಾರಿಗಳ ನಿಖರ ವ್ಯಾಪ್ತಿ ಮತ್ತು ಸ್ವರೂಪವನ್ನು ರಾಷ್ಟ್ರೀಯ ಸಂಸ್ಕೃತಿ ನಿಧಿ ಹಾಗೂ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ (ಎಎಸ್ಐ) ಸಮಾಲೋಚನೆ ನಡೆಸಿ ಅಂತಿಮಗೊಳಿಸಲಿವೆ.

ಈಗಾಗಲೇ ಹಂಪಿ ವಸ್ತುಸಂಗ್ರಹಾಲಯ ಡಿಜಿಟಲೀಕರಣ ಕಳೆದ ವರ್ಷ ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರದ (ಎಎಐ) ಆರ್ಥಿಕ ನೆರವಿನೊಂದಿಗೆ ಹಂಪಿಯ ಎಎಸ್ಐ ವಸ್ತುಸಂಗ್ರಹಾಲಯದ ಡಿಜಿಟಲೀಕರಣ ಕಾರ್ಯ ಆರಂಭಿಸಲಾಗಿದೆ. 1996ರಲ್ಲಿ ರಾಷ್ಟ್ರೀಯ ಸಂಸ್ಕೃತಿ ನಿಧಿ ಸ್ಥಾಪನೆಯಾದ ನಂತರ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು ಮತ್ತು ಖಾಸಗಿ ಕಂಪನಿಗಳ ನೆರವಿನಿಂದ ದೇಶಾದ್ಯಂತ 60ಕ್ಕೂ ಹೆಚ್ಚು ಪಾರಂ ಪರಿಕ ಸಂರಕ್ಷಣಾ ಯೋಜನೆಗಳಿಗೆ ಹಣಕಾಸು ಒದಗಿಸಲಾಗಿದೆ.

ಐತಿಹಾಸಿಕ ಕಟ್ಟಡಗಳ ಪುನರುಜ್ಜೀವನ, ವಸ್ತುಸಂಗ್ರಹಾಲಯಗಳ ಅಭಿವೃದ್ಧಿ, ಸ್ಮಾರಕಗಳಿಗೆ ಬೆಳಕಿನ ವ್ಯವಸ್ಥೆ ಹಾಗೂ ಹಳೆಯ ದಾಖಲೆಗಳ ಡಿಜಿಟಲೀಕರಣ ಇವುಗಳಲ್ಲಿ ಸೇರಿವೆ. ರಾಷ್ಟ್ರೀಯ ಸಂಸ್ಕೃತಿ ನಿಧಿಯು ಸರ್ಕಾರಿ ಸಂಸ್ಥೆಗಳು, ಸಾರ್ವಜನಿಕ ವಲಯದ ಕಂಪನಿಗಳು ಹಾಗೂ ಖಾಸಗಿ ಸಂಸ್ಥೆಗಳು ಪಾರಂಪರಿಕ ತಾಣಗಳ ಸಂರಕ್ಷಣೆಗೆ ಸರ್ಕಾರದೊಂದಿಗೆ ಕೈಜೋಡಿಸಲು ನೆರವಾಗುವ ವ್ಯವಸ್ಥೆಯಾಗಿದೆ.

ಇದರ ಹೊರತಾಗಿಯೂ ಎಎಸ್ಐ ತನ್ನ ವ್ಯಾಪ್ತಿಯಲ್ಲಿರುವ ದೇಶದ 3,697 ಸ್ಮಾರಕಗಳ ಸಂರಕ್ಷಣಾ ಕಾರ್ಯವನ್ನು ನಿಯಮಿತವಾಗಿ ಕೈಗೊಳ್ಳುತ್ತಿದೆ. 2021ರಿಂದ 2026ರ ಅವಧಿಯಲ್ಲಿ ರಾಷ್ಟ್ರೀಯ ಸಂಸ್ಕೃತಿ ನಿಧಿಗೆ ?24 ಕೋಟಿ ದೇಣಿಗೆ ಬಂದಿದೆ ಎಂದು ಕೇಂದ್ರ ಸಂಸ್ಕೃತಿ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಅವರು ಕಳೆದ ಮಾರ್ಚ್ನಲ್ಲಿ ರಾಜ್ಯಸಭೆಗೆ ನೀಡಿದ ಉತ್ತರದಲ್ಲಿ ತಿಳಿಸಿದ್ದಾರೆ.

ರಾಷ್ಟ್ರೀಯ ಸಂಸ್ಕೃತಿ ನಿಧಿಯಡಿ ನಡೆಯುವ ಯೋಜನೆಗಳ ಪ್ರಗತಿಯನ್ನು ಯೋಜನಾ ಅನುಷ್ಠಾನ ಸಮಿತಿ (ಪಿಐಸಿ) ಪರಿಶೀಲಿಸುತ್ತದೆ. ದಾನಿಗಳು ಮತ್ತು ಕಾಮಗಾರಿ ಅನುಷ್ಠಾನ ಸಂಸ್ಥೆಗಳೊಂದಿಗೆ ಮಾಡಿಕೊಂಡಿರುವ ಒಪ್ಪಂದಗಳ ಪ್ರಕಾರ ಯೋಜನೆಗಳ ಕಾಲಮಿತಿಯನ್ನು ನಿಗದಿಪಡಿಸಲಾಗುತ್ತದೆ.

ಒಂದನೇಯ ಪುಟದಿಂದ

ದಿ.17: ಆಶಾಕಾರ್ಯಕರ್ತರಿಗೆ 15 ಸಾವಿರ ಗೌರವಧನ ಸೇರಿ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಬೆಂಗಳೂರಿನಲ್ಲಿ ರಾಜ್ಯಮಟ್ಟದ ಅನಿರ್ದಿಷ್ಟ ಹೋರಾಟ

ಕೇವಲ 1,500 ಮಾತ್ರ ಹೆಚ್ಚಿಸಿದೆ. ಆದರೆ ಕೆಲಸದ ಹೊರೆ ಮಾತ್ರ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಕೇರಳ, ಮಹಾರಾಷ್ಟ್ರ, ಪಶ್ಚಿಮ ಬಂಗಾಳ ಹಾಗೂ ಹರಿಯಾಣ ಸೇರಿದಂತೆ ಹಲವು ರಾಜ್ಯಗಳಲ್ಲಿ ಆಶಾ ಕಾರ್ಯಕರ್ತೆಯರಿಗೆ ಸುಮಾರು 12 ಸಾವಿರ ನಿಶ್ಚಿತ ಗೌರವಧನ ನೀಡಲಾಗುತ್ತಿದೆ. ಕೇಂದ್ರದ ಪ್ರೋತ್ಸಾ ಹಧನ ಸೇರಿ ಕೆಲವೆಡೆ 16 ಸಾವಿರದಿಂದ 20 ಸಾವಿರದವರೆಗೆ ಮಾಸಿಕ ಆದಾಯ ದೊರೆಯುತ್ತಿದೆ. ಕರ್ನಾಟಕದಲ್ಲಿಯೂ ಕನಿಷ್ಠ 15 ಸಾವಿರ ನಿಶ್ಚಿತ ಗೌರವಧನ ನೀಡಬೇಕೆಂಬುದು ಆಶಾ ಕಾರ್ಯಕರ್ತೆಯರ ನ್ಯಾಯಯುತ ಬೇಡಿಕೆಯಾಗಿದೆ ಎಂದರು. ಸಚಿವರ ತುಟ್ಟಿ ಭತ್ಯೆ ವೇತನ ಹೆಚ್ಚಳ ಮಾಡಲಾಗಿದೆ. ಹಣದ ಕೊರೆತೆ ನೆಪದಲ್ಲಿ ಆಶಾಕಾರ್ಯತರ ನ್ಯಾಯಯುತ ಬೇಡಿಕೆ ಈಡೇರಿಸುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಆಶಾ ಕಾರ್ಯಕರ್ತೆಯರು ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ಹಲವು ಬಾರಿ ಹೋರಾಟ, ಪ್ರತಿಭಟನೆ ಹಾಗೂ ಮನವಿ ಸಲ್ಲಿಸಿದ್ದಾರೆ. ಈ ಹಿಂದಿನ ಹೋರಾಟದ ಸಂದರ್ಭದಲ್ಲಿ ಅಂದಿನ ಮುಖ್ಯಮಂತ್ರಿಗಳು 10 ಸಾವಿರ ನಿಶ್ಚಿತ ಗೌರವಧನ ನೀಡುವುದಾಗಿ ಘೋಷಿಸಿದ್ದರೂ, ಅದು ಈವರೆಗೆ ಸಮರ್ಪಕವಾಗಿ ಕಾರ್ಯರೂಪಕ್ಕೆ ಬಂದಿಲ್ಲ. ಕೇವಲ ಭರವಸೆಗಳಿಂದ ಕುಟುಂಬ ನಿರ್ವಹಣೆ ಸಾಧ್ಯವಿಲ್ಲ. ದುಡಿಮೆಗೆ ತಕ್ಕ ಗೌರವಧನ ನೀಡುವುದು ಸರ್ಕಾರದ ಕರ್ತವ್ಯವಾಗಿದೆ ಎಂದು ಒತ್ತಾಯಿಸಿದ್ದಾರೆ.

ಸರ್ಕಾರದ ಗ್ಯಾರಂಟಿ ಯೋಜನೆಗಳಡಿ ಮಹಿಳೆಯರಿಗೆ ನೀಡುವ ಹಣವನ್ನು ಆಶಾ ಕಾರ್ಯಕರ್ತೆಯರ ಗೌರವಧನದ ಭಾಗವೆಂದು ಪರಿಗಣಿಸುವುದು ಸರಿಯಲ್ಲ. ಗ್ಯಾರಂಟಿ ಯೋಜನೆಯ ಸೌಲಭ್ಯವು ಎಲ್ಲ ಅರ್ಹ ಮಹಿಳೆಯರಿಗೂ ಅನ್ವಯಿಸುವ ಸಾಮಾನ್ಯ ಸೌಲಭ್ಯವಾಗಿದೆ. ಆಶಾ ಕಾರ್ಯಕರ್ತೆಯರು ಅನೇಕ ವರ್ಷಗಳಿಂದ ಸಲ್ಲಿಸುತ್ತಿರುವ ಆರೋಗ್ಯ ಸೇವೆಗೆ ಪ್ರತ್ಯೇಕವಾಗಿ ನ್ಯಾಯಯುತ ಗೌರವಧನ ನೀಡಬೇಕು ಎಂದು ಒತ್ತಾಯಿಸಿದರು.

ಈ ಹೋರಾಟದಲ್ಲಿ 4 ಸಾವಿರ ಆಶಾಕಾರ್ಯಕರ್ತರು ಭಾಗವಹಿಸಲಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಗೌರವ ಪ್ರಭು ಹೊಸಮನಿ, ವಿಮಲಾ, ಮಹೇಶ, ಅಣ್ಣಪ್ಪ, ಶೋಭಾ ಸೇರಿದಂತೆ ಉಪಸ್ಥಿತರಿದ್ದರು.

ಲಿಂಗಸೂಗೂರಿನ 13 ಮಸ್ಜಿದ್ ಕಮಿಟಿಗಳಿಗೆ ರಾಯಚೂರು ಜಿಲ್ಲಾ ವಕ್ಫ್ ಮಂಡಳಿಯಿಂದ ಬುಲಾವ್

19-11-2026ರಂದು ಬೆಳಿಗ್ಗೆ 11:30 ಗಂಟೆಗೆ ಸಂಬಂಧಪಟ್ಟ ಎಲ್ಲಾ ಮಸ್ಜಿದ್ ಕಮಿಟಿಗಳ ಪದಾಧಿಕಾರಿಗಳು ಮೀಟಿಂಗ್ ಗೆ ಕಡ್ಡಾಯವಾಗಿ ಹಾಜರಾಗಬೇಕೆಂದು ಸೂಚಿಸಲಾಗಿದೆ.

ಅಂಜುಮನ್ ಗೌರವಾಧ್ಯಕ್ಷ ಜನಾಬ್ ಅನ್ಸ ರುದ್ದಿನ್ ಅವರ ಹೇಳಿಕೆ:

ವಕ್ಫ್ ಆಸ್ತಿಗಳು ಮತ್ತು ಮಸ್ಜಿದ್‌ಗಳು ಸಮುದಾಯದ ಅಮೂಲ್ಯ ಧಾರ್ಮಿಕ ಹಾಗೂ ಸಾರ್ವಜನಿಕ ಆಸ್ತಿಗಳಾಗಿವೆ. ಅವುಗಳ ನಿರ್ವಹಣೆ ಮತ್ತು ಆರ್ಥಿಕ ವ್ಯವಹಾರಗಳಲ್ಲಿ ಸಂಪೂರ್ಣ ಪಾರದರ್ಶಕತೆ ಇರಬೇಕು. ಯಾವುದೇ ವ್ಯಕ್ತಿ ಅಥವಾ ಸಮಿತಿಯು ಸಾರ್ವಜನಿಕ ನಂಬಿಕೆಗೆ ಧಕ್ಕೆ ತರುವ ರೀತಿಯಲ್ಲಿ ನಡೆದುಕೊಳ್ಳಬಾರದುಅಂಜುಮನ್ ಕಮಿಟಿಯು ಯಾರ ವಿರುದ್ಧವೂ ವೈಯಕ್ತಿಕ ದ್ವೇಷದಿಂದ ದೂರು ನೀಡಿಲ್ಲ. ಬದಲಾಗಿ, ವಕ್ಫ್ ಆಸ್ತಿಗಳ ರಕ್ಷಣೆ, ಮಸ್ಜಿದ್‌ಗಳ ಆಡಳಿತದಲ್ಲಿ ಪಾರದರ್ಶಕತೆ ಹಾಗೂ ಸಮುದಾಯದ ಹಿತಾಸಕ್ತಿಯನ್ನು ಕಾಪಾಡುವ ಉದ್ದೇಶದಿಂದ ಕಾನೂನುಬದ್ಧವಾಗಿ ಹೋರಾಟ ನಡೆಸುತ್ತಿದೆ.

ನಮ್ಮ ಕಮಿಟಿಯ ಸಾಮಾಜಿಕ ಕಳಕಳಿಯುಳ್ಳ ಕಾರ್ಯಕ್ರಮಗಳು ಹಾಗೂ ಘೋಷಣೆಗಳಿಗೆ ಅಡ್ಡಿಪಡಿಸಲಾಗುತ್ತಿದೆ ಎಂಬ ಆರೋಪದ ಬಗ್ಗೆಯೂ ಸಂಬಂಧಪಟ್ಟ ಅಧಿಕಾರಿಗಳು ನಿಷ್ಪಕ್ಷಪಾತವಾಗಿ ತನಿಖೆ ನಡೆಸಬೇಕು. ಸತ್ಯಾಸತ್ಯತೆ ಹೊರಬಂದು ತಪ್ಪಿತಸ್ಥರು ಯಾರೇ ಆಗಿದ್ದರೂ ಕಾನೂನಿನ ಪ್ರಕಾರ ಕ್ರಮ ಜರುಗಬೇಕು. ವಕ್ಫ್ ಮಂಡಳಿಯ ಈ ಕ್ರಮವನ್ನು ನಾವು ಸ್ವಾಗತಿಸುತ್ತೇವೆ. ತನಿಖೆಯು ಯಾವುದೇ ಒತ್ತಡ, ಪ್ರಭಾವ ಅಥವಾ ಪಕ್ಷಪಾತಕ್ಕೆ ಒಳಗಾಗದೆ ನ್ಯಾಯಸಮ್ಮತವಾಗಿ ನಡೆಯಬೇಕು ಎಂಬುದು ನಮ್ಮ ಆಶಯವಾಗಿದೆ, ಎಂದು ತಿಳಿಸಿದರು.

ನ.15:ತಾಯಣ್ಣ ಯರಗೇರಾ ಭಾರತ ದರ್ಶನ ಪ್ರವಾಸ

ನೀಡಲಾಗುವುದು. ಸೂರ್ಯೋದಯ ವಾಕಿಂಗ್ ಕ್ಲಬ್ ವತಿಯಿಂದ ಪ್ರವಾಸಕ್ಕೆ ಶುಭ ಹಾರೈಸಿ ಬೀಳ್ಕೊಡುಗೆ ಸಮಾರಂಭ ಆಯೋಜಿಸಲಾಗಿದೆ. ಬಿ. ಬಸವರಾಜ್ ಹಾಗೂ ವಾಕಿಂಗ್ ಕ್ಲಬ್‌ನ ಸದಸ್ಯರು ಪ್ರಯಾಣಕ್ಕೆ ಚಾಲನೆ ನೀಡಲಿದ್ದಾರೆ ಎಂದರು.

68ನೇ ವಯಸ್ಸಿ ನಲ್ಲಿಯೂ ದೇಶವನ್ನು ಸುತ್ತಿ, ಅಲ್ಲಿನ ಜನಜೀವನ ಮತ್ತು ಸಾಮಾಜಿಕ ಸ್ಥಿತಿಗತಿಗಳನ್ನು ತಿಳಿದುಕೊಳ್ಳುವ ತಾಯಣ್ಣ ಯರಗೇರಾ ಅವರ ಪ್ರಯತ್ನ ಇತರರಿಗೂ ಪ್ರೇರಣೆಯಾಗಲಿದೆ. ಈ ವಿಶೇಷ ಪ್ರವಾಸದ ಆರಂಭದ ಕಾರ್ಯಕ್ರಮದಲ್ಲಿ ಸಾರ್ವಜನಿಕರು, ಸ್ನೇಹಿತರು ಹಾಗೂ ಹಿತೈಷಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಶುಭ ಹಾರೈಸಬೇಕು ಎಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ತಾಯಣ್ಣ ಯರಗೇರಾ, ಅಯ್ಯಣ್ಣ ಗೌಡ ಹಾಗೂ ಎಚ್.ಎಂ. ಸುರೇಶ ಉಪಸ್ಥಿತರಿದ್ದರು.

ತೆಕ್ಕಲಕೋಟೆ ಅಭಯ ಆಂಜನೇಯ ಸ್ವಾಮಿ ದೇವಸ್ಥಾನದ ಆವರಣದಲ್ಲಿ 10 ಲಕ್ಷರೂ, ವೆಚ್ಚದ ಸಮುದಾಯ ಭವನ ನಿರ್ಮಾಣಕ್ಕೆ ಶಾಸಕ ಬಿ ಎಂ ನಾಗರಾಜರಿಂದ ಭೂಮಿ ಪೂಜೆ



ಸಿರುಗುಪ್ಪ - ತಾಲೂಕಿನ ತೆಕ್ಕಲಕೋಟೆ ಪಟ್ಟಣದಲ್ಲಿ 2025-26ನೇ ಸಾಲಿನ ಲೋಕೋಪಯೋಗಿ ಇಲಾಖೆಯ ಮಾನ್ಯ ಮುಖ್ಯಮಂತ್ರಿಯವರ ಮೂಲಸೌಕರ್ಯ ಅಭಿವೃದ್ಧಿ ಯೋಜನೆ(ಸಿಎಂಐಡಿಪಿ) ಅಡಿಯಲ್ಲಿ ಮಂಜೂರಾದ 10ಲಕ್ಷ ರೂಪಾಯಿ ವೆಚ್ಚದ ಶ್ರೀ ಅಭಯ ಆಂಜನೇಯ ಸ್ವಾಮಿ ದೇವಸ್ಥಾನ ಆವರಣದಲ್ಲಿ ಸಮುದಾಯ ಭವನ ನಿರ್ಮಾಣದ ಭೂಮಿ ಪೂಜೆಯನ್ನು ಸಿರುಗುಪ್ಪ ವಿಧಾನಸಭಾ ಕ್ಷೇತ್ರದ ಶಾಸಕ ಬಿ.ಎಂ.ನಾಗರಾಜ ಅವರು ನೆರವೇರಿಸಿದರು

ಈ ಸಂದರ್ಭದಲ್ಲಿ ಪಟ್ಟಣ ಪಂಚಾಯತಿಯ ಮುಖ್ಯ ಅಧಿಕಾರಿಗಳಾದ ಪರಶುರಾವ್, ದೇವಸ್ಥಾನ ಟ್ರಸ್ಟಿನ ಪದಾಧಿಕಾರಿಗಳು ಮುಖಂಡರಾದ ಮಲ್ಲಿಕಾರ್ಜುನ ಬಾಲಪ್ಪ, ಜಿ.ವೀರಶಪ್ಪ, ದೇವರಮನೆ ನಾಗಪ್ಪ, ಶಾಮಸುಂದರ, ಪರಮೇಶ್ವರ ಸುಂಕಪ್ಪ ರಂಜಾನ್ ಸಲಾಫಿ, ಕಿರಣ್ ಸ್ವಾಮಿ, ಬಂದೆ ನವಾಜ್, ಖಾದರ್ ವಲಿ, ನಸರುದ್ದೀನ್, ನೀಲಕಂಠ, ಬಿ.ಉಮೇಶ್ ಗೌಡ, ಪವನ್ ದೇಸಾಯಿ, ಗುರುಮೂರ್ತಿ ಗೌಡ್ರು, ಮಂಜುನಾಥ್, ಯುವ ಕಾಂಗ್ರೆಸ್ ಅಧ್ಯಕ್ಷರಾದ ಅಗ್ರಹಾರ ಗೋವಿಂದ ಹಾಗೂ ಕಾಂಗ್ರೆಸ್ ಮುಖಂಡರುಗಳು ಕಾರ್ಯಕರ್ತರು ಪಾಲ್ಗೊಂಡಿದ್ದರು.

ಕೆ.ಬೆಳಗಲ್ಲು ಗ್ರಾಮದಲ್ಲಿ ಶಾರದಾಂಭ ಸಂಸ್ಕೃತ ಬಾಲಕೇಂದ್ರ ಉದ್ಘಾಟನೆ



ಸಿರುಗುಪ್ಪ - ಇಂದಿನ ಯುವ ಪೀಳಿಗೆ ಕೇವಲ ವಿದ್ಯಾವಂತರಾಗದೆ, ಸಂಸ್ಕಾರವಂತರಾಗಿ ಬೆಳೆಯಲು ಇಂತಹ ಸಂಸ್ಕೃತ ಬಾಲಕೇಂದ್ರಗಳು ಬಹಳ ಮುಖ್ಯವಾಗಿದೆ ಎಂದು ಸಂಸ್ಕೃತ ಭಾರತೀ ತಾಲ್ಲೂಕು ಸಂಚಾಲಕ ಹುಚ್ಚಿರೇಶ್ವರ ಹೇಳಿದರು. ತಾಲ್ಲೂಕಿನ ಕೆ.ಬೆಳಗಲ್ಲು ಗ್ರಾಮದಲ್ಲಿ ಸಂಸ್ಕೃತ ಭಾರತೀ ತಾಲ್ಲೂಕು ವತಿಯಿಂದ ಬುಧವಾರ ಸಂಜೆ ಶಾರದಾಂಭ ಸಂಸ್ಕೃತ ಬಾಲಕೇಂದ್ರದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದರು.

ಸಂಸ್ಕೃತ ಭಾರತೀ ತಾಲ್ಲೂಕು ಸಂಪರ್ಕ ಪ್ರಮುಖರಾದ ದೇವಾ ಮಹೋದಯ ಅವರು ಸಂಸ್ಕೃತ ಭಾಷೆಯ ಐತಿಹಾಸಿಕ ಹಿನ್ನೆಲೆ ಹಾಗೂ ಇಂದಿನ ಯುವ ಪೀಳಿಗೆಗೆ ಸಂಸ್ಕೃತ ಭಾಷೆಯ ಕಲಿಕೆಯ ಅವಶ್ಯಕತೆಯ ಕುರಿತು ವಿಶೇಷ ಉಪನ್ಯಾಸ ನೀಡಿದರು.

ಗ್ರಾಮದ ಅರ್ಚಕ ಮಂಜುನಾಥ ಸ್ವಾಮಿ, ಕೆ. ಬೆಳಗಲ್ಲು ಮಂಡಲದ ಆರ್.ಎಸ್.ಎಸ್. ಕಾರ್ಯವಾಹರಾದ ವೀರೇಶ, ನಾರಾಯಣಪ್ಪ ಮುಖಂಡರಾದ ತಿಮ್ಮಣ್ಣ ನಾಯಕ, ವೀರೇಂದ್ರ, ಸೇರಿದಂತೆ ಇನ್ನಿತರರು ಭಾಗವಹಿಸಿದ್ದರು.

ಪತ್ರಿಕೆ ಓದುವ ಹವ್ಯಾಸ ಬೆಳಸಿಕೊಳ್ಳಿ

ಸಂಚಲನ ಸೃಷ್ಟಿಸಿದ ಕೇಸ್ - ಕೊಲೆಯಾಗಿದ್ದ ಮಹಿಳೆ ದಿಢೀರ್ ಪ್ರತ್ಯಕ್ಷ; ಪ್ರಕರಣದಲ್ಲಿ 2.5 ವರ್ಷ ಜೈಲು ಪಾಲಾಗಿದ್ದ ಅಮಾಯಕ!

ಮಂಡ್ಯ: 7 ವರ್ಷಗಳ ಹಿಂದೆ ಕೊಲೆಯಾಗಿದ್ದಾಳೆ ಎಂದು ಭಾವಿಸಿದ್ದ ಮಹಿಳೆಯೊಬ್ಬರು ಡಿಢೀರ್ ಪ್ರತ್ಯಕ್ಷವಾಗಿದ್ದಾರೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಕೊಲೆ ಆರೋಪದ ಮೇಲೆ ಅಮಾಯಕ ವ್ಯಕ್ತಿ ರಾಜೇಶ್ ಎಂಬಾತ 2.5 ವರ್ಷ ಜೈಲಿಗೆ ಹೋಗಿದ್ದ ಅಮಾನವೀಯ ಘಟನೆ ಪಾಂಡವಪುರದಲ್ಲಿ ತಡವಾಗಿ ಬೆಳಕಿಗೆ ಬಂದಿದೆ.



ಈ ಪ್ರಕರಣದಲ್ಲಿ 2021 ರಿಂದ ಎರಡೂವರೆ ವರ್ಷ ಜೈಲಿನಲ್ಲಿದ್ದ ಪಾಂಡವಪುರದ ರಾಗಿಮುದ್ದನಹಳ್ಳಿ ನಿವಾಸಿ ರಾಜೇಶ್, 2024ರ ಜನವರಿಯಲ್ಲಿ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದ. ಇದೀಗ ಪ್ರಕರಣಕ್ಕೆ ಅನಿರೀಕ್ಷಿತ ತಿರುವು ಸಿಕ್ಕಿದೆ. ಕೊಲೆಯಾಗಿದ್ದಾಳೆ ಎಂದು ಭಾವಿಸಲಾಗಿದ್ದ ಮಹಿಳೆ ನಾಗವಂಗಲದಲ್ಲಿ ಪತ್ತೆಯಾಗಿದ್ದಾಳೆ. ರಾಜೇಶ್ ಪರ ವಕೀಲ ನಟೇಶ್ ಅವರಿಗೆ ಸಿಕ್ಕ ಖಚಿತ ಮಾಹಿತಿಯ ಆಧಾರದ ಮೇಲೆ ಮಹಿಳೆಯನ್ನು ಪತ್ತೆ ಹಚ್ಚಿ ಬಿಂಡಿಗನವಿಲೆ ಪೊಲೀಸರ ವಶಕ್ಕೆ ಒಪ್ಪಿಸಿದ್ದು, ಈಗ ಸಾಂತ್ವನ ಕೇಂದ್ರಕ್ಕೆ ಕಳುಹಿಸಲಾಗಿದೆ.

ಪ್ರಕರಣದ ಹಿನ್ನೆಲೆ: 2019ರಲ್ಲಿ ಪಾಂಡವಪುರ ಪಟ್ಟಣದಿಂದ ಮಹಿಳೆ ನಾಪತ್ತೆಯಾಗಿದ್ದಳು. ಮಗಳ ನಾಪತ್ತೆ ಹಿನ್ನೆಲೆಯಲ್ಲಿ ತಂದೆ ನಾಗರಾಜು ಪಾಂಡವಪುರ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರು. ನಾಪತ್ತೆಗೂ ಮುನ್ನ ಮಹಿಳೆ ಪಾಂಡವಪುರ ಬಸ್ ನಿಲ್ದಾಣದಲ್ಲಿ ಆಕಸ್ಮಿಕವಾಗಿ ಸಿಕ್ಕಿದ್ದ ರಾಜೇಶ್ ಎಂಬಾತನ ಮೊಬೈಲ್‌ನಿಂದ ಕೊನೆಯ ಕರೆ ಮಾಡಿದ್ದಳು. ಈ ಕರೆಯನ್ನು ಆಧಾರವಾಗಿಟ್ಟುಕೊಂಡ ಪೊಲೀಸರು, ರಾಜೇಶ್ ವಿರುದ್ಧ ಕೊಲೆ ಪ್ರಕರಣ ದಾಖಲಿಸಿದ್ದರು. ಬಳಿಕ ರಾಜೇಶ್‌ನನ್ನು ಬಂಧಿಸಿ ಜೈಲಿಗೂ ಕಳುಹಿಸಿದ್ದರು ಎಂದು ವಕೀಲ ನಟೇಶ್ ಅವರು ಹೇಳಿದ್ದಾರೆ.

ಮಾಧ್ಯಮ ಪ್ರಕಟಣೆ ಮೂಲಕ ಪೊಲೀಸರ ವಿರುದ್ಧ ಆರೋಪ ಮಾಡಿರುವ ರಾಜೇಶ್: ಪ್ರಕರಣಕ್ಕೆ ಸಂಬಂಧಿಸಿದಂತೆ ವಶಕ್ಕೆ ಪಡೆದ ಪೊಲೀಸರು ತನಗೆ ಹಿಂಸೆ ನೀಡಿದ್ದರು ಎಂದು ಶಿಕ್ಷೆ ಅನುಭವಿಸಿದ ರಾಜೇಶ್ ಮಾಧ್ಯಮ ಹೇಳಿಕೆಯಲ್ಲಿ ಆರೋಪಿಸಿದ್ದಾನೆ. ಅಲ್ಲದೇ ಮನೆಯವರನ್ನು ಬಂಧಿಸುವುದಾಗಿ ಬೆದರಿಕೆ ಹಾಕಿದ್ದರು. ಪೊಲೀಸರ ಒತ್ತಡಕ್ಕೆ ಹೆದರಿ ಮಾಡದ ತಪ್ಪನ್ನು ಒಪ್ಪಿಕೊಂಡಿದ್ದಾಗಿ ರಾಜೇಶ್ ಆರೋಪಿಸಿದ್ದಾನೆ.

ಮಾಧ್ಯಮದ ಮುಂದೆ ಹೇಳಿಕೆ ನೀಡಿರುವ ಮಹಿಳೆ, 'ತನಗೆ ಇಷ್ಟವಿಲ್ಲದ ಮದುವೆ ಮಾಡಿದ್ದರಿಂದ ಮನೆ ಬಿಟ್ಟು ಹೋಗಿದ್ದಾಗಿ' ತಿಳಿಸಿದ್ದಾಳೆ. ಇದೀಗ ಮತ್ತೊಬ್ಬ ವ್ಯಕ್ತಿಯನ್ನು ಮದುವೆಯಾಗಿ ಜೀವನ ನಡೆಸುತ್ತಿದ್ದೇನೆ. ನಾನು ಕೊಲೆಯಾಗಿದ್ದೇನೆ ಎಂದು ಕೊಲೆ ಪ್ರಕರಣ ದಾಖಲಾಗಿರುವುದು ನನಗೆ ಗೊತ್ತಿಲ್ಲ. ರಾಜೇಶ್ ಎಂಬಾತ ನನಗೆ ಪರಿಚಯವೇ ಇಲ್ಲ ಎಂದು ಹೇಳಿಕೆ ನೀಡಿದ್ದಾಳೆ. ಇದರಿಂದಾಗಿ ರಾಜೇಶ್ ವಿರುದ್ಧ ದಾಖಲಾಗಿದ್ದ ಕೊಲೆ ಪ್ರಕರಣದ ತನಿಖೆಯಲ್ಲಿನ ಲೋಪಗಳ ಬಗ್ಗೆ ಈಗ ಪ್ರಶ್ನೆಗಳು ಎದ್ದಿವೆ.

ಪ್ರಕರಣದ ಬಗ್ಗೆ ಎಸ್ ಪ್ರತಿಕ್ರಿಯೆ: 2019ರಲ್ಲಿ ನಾಗರಾಜು ಎನ್ನುವವರು ತಮ್ಮ ಮಗಳು ಮಂಜು ಅನ್ನು ಮಂಜುನಾಥ ಎಂಬುವವರಿಗೆ ಮದುವೆ ಮಾಡಿಕೊಟ್ಟಿರುತ್ತಾರೆ. ಅಲ್ಲಿಂದ ಹುಷಾರಿಲ್ಲ ಎಂದು ಮಹಿಳೆ ತಂದೆ ಮನೆಗೆ ಬಂದಿರುತ್ತಾರೆ. ಆದರೆ ದಿನಾಂಕ 3-07-2019ರಲ್ಲಿ ಮಗಳು (ಮಂಜು) ನಾಪತ್ತೆಯಾಗಿದ್ದಾಳೆ ಎಂದು ಪಾಂಡವಪುರ ಪೊಲೀಸ್ ಠಾಣೆಯಲ್ಲಿ ಮಿಸ್ಸಿಂಗ್ ಕೇಸ್ ದಾಖಲಾಗುತ್ತದೆ. ಮಹಿಳೆಯ ಪತ್ತೆಗೆ ಶೋಧ ನಡೆದಿತ್ತು, ಆದರೆ ಸಿಕ್ಕಿರುವುದಿಲ್ಲ. 2021ರಲ್ಲಿ ಮಹಿಳೆಯ ತಂದೆ ಪಾಂಡವರಪುರ ಪೊಲೀಸ್ ಠಾಣೆಗೆ ಬಂದು ರಾಜೇಶ್ ಎಂಬಾತ ತನ್ನ ಮಗಳನ್ನು ಕಾಣೆಯಾದ ದಿನ ಕರೆದುಕೊಂಡು ಹೋಗಿ ರಾತ್ರಿ ಕೊಲೆ ಮಾಡಿ ಕಾಲುವೆಗೆ ಬಿಸಾಕಿದ್ದಾನೆಂದು ದೂರು ನೀಡಿದ್ದರು. ಈ ದೂರಿನ ಬಗ್ಗೆ ಆಗಿನ ಇನ್ಸ್‌ಪೆಕ್ಟರ್ ಪಿಐ ಪ್ರಭಾಕರ್ ಅವರು ತನಿಖೆ ನಡೆಸಿ ಆರೋಪಿಯನ್ನು ದಸ್ತಗಿರಿ ಮಾಡಿ ಚಾರ್ಜ್ ಶೀಟ್ ಹಾಕಿದ್ದರು. ಆದರೆ ನವೆಂಬರ್ 11 2026 ರಂದು ರಾಜೇಶ್ ಪರ ವಕೀಲ ನಟೇಶ್ ಅವರು ಆ ಮಹಿಳೆ ಬದುಕಿದ್ದಾರೆಂದು ತಿಳಿಸಿದ್ದು, ಪ್ರಕರಣ ದಾಖಲಿಸಿದ್ದಾರೆ. ಸದ್ಯ ಆ ಮಹಿಳೆಯನ್ನು ಸಾಂತ್ವನ ಕೇಂದ್ರಕ್ಕೆ ಬಿಡಲಾಗಿದೆ. ಅಂದಿನ ತನಿಖೆಯಲ್ಲಿ ಆಗಿರುವ ಲೋಪಗಳ ಕುರಿತು ಪರಿಶೀಲನೆ ನಡೆಸಬೇಕಿದೆ. ಪ್ರಕರಣದ ತನಿಖಾಧಿಕಾರಿಯಾಗಿದ್ದ ಪಿಐ ಪ್ರಭಾಕರ್ ಈಗಾಗಲೇ ನಿವೃತ್ತರಾಗಿದ್ದಾರೆ. ಹೀಗಾಗಿ ಡಿವೈಎಸ್ಪಿ ನೇತೃತ್ವದಲ್ಲಿ ವಿಚಾರಣೆ ನಡೆಸಲು ಸೂಚಿಸಲಾಗಿದೆ. ತನಿಖೆಯಲ್ಲಿ ತಪ್ಪಿತಸ್ಥರು ಕಂಡುಬಂದಲ್ಲಿ ಕ್ರಮ ಕೈಗೊಳ್ಳಲಾಗುವುದಾಗಿ ಮಂಡ್ಯ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ವಿ.ಜೆ. ಶೋಭಾರಾಣಿ ತಿಳಿಸಿದ್ದಾರೆ.

ನ.14ರಂದು ಕಲಬುರಗಿಯಲ್ಲಿ ಕೃಷಿಕಲ್ಪ ಸೆಂಟರ್ ಆಫ್ ಎಕ್ಸ್ ಲೆನ್ಸ್ ನೂತನ ಕಚೇರಿ ಉದ್ಘಾಟನೆ

ಕಲಬುರಗಿ : ಇಲೆಕ್ಟ್ರಾನಿಕ್ಸ್, ಐಟಿ ಮತ್ತು ಬಿಟಿ ಇಲಾಖೆಯ ಅಧೀನದಲ್ಲಿರುವ ಕರ್ನಾಟಕ ಇನ್ನೋವೇಶನ್ ಆ್ಯಂಡ್ ಟೆಕ್ನಾಲಜಿ ಸೊಸೈಟಿ ()ಯ ಯೋಜನೆಯಡಿ ಆರ್ಥಿಕ ಸಹಕಾರದೊಂದಿಗೆ ಕೃಷಿಕಲ್ಪ ಫೌಂಡೇಶನ್ ವತಿಯಿಂದ ಅನುಷ್ಠಾನಗೊಳ್ಳುತ್ತಿರುವ ಸೆಂಟರ್ ಆಫ್ ಎಕ್ಸ್ ಲೆನ್ಸ್ ಇನ್‌ಕ್ಯುಬೇಷನ್ ಸೆಂಟರ್ನ ಕಲಬುರಗಿ ನೂತನ ಕಚೇರಿಯ ಉದ್ಘಾಟನಾ ಸಮಾರಂಭ ನವೆಂಬರ್ 14ರಂದು ಶನಿವಾರ ಬೆಳಿಗ್ಗೆ 9.30ಕ್ಕೆ ನಗರದ ಗಾಜಿಪುರ ಚಕ್ಕರ್ ಕಟ್ಟಾದಲ್ಲಿರುವ (ಸಿಟಿ ಸೆಂಟರ್ ಮಾಲ್ ಸಮೀಪ, ಬ್ಯಾಂಕ್ ಆಫ್ ಮಹಾರಾಷ್ಟ್ರ ಮುಂಭಾಗ) ಕೃಷಿಕಲ್ಪ ಸೆಂಟರ್ ಆಫ್ ಎಕ್ಸ್ ಲೆನ್ಸ್ ಕಚೇರಿಯಲ್ಲಿ ನಡೆಯಲಿದೆ.

ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಹಾಗೂ ರಾಜ್ಯಸಭಾ ಸದಸ್ಯ ಡಾ.ಮಲ್ಲಿಕಾರ್ಜುನ ಖರ್ಗೆ ಅವರು ಸಮಾರಂಭದಲ್ಲಿ ಗೌರವ ಉಪಸ್ಥಿತಿ ವಹಿಸಲಿದ್ದಾರೆ. ರಾಜ್ಯದ ಗೃಹ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಇ-ಆಡಳಿತ ಇಲಾಖೆಯ ಸಚಿವ ಮತ್ತು ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಅವರು ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ.

ವೈದ್ಯಕೀಯ ಶಿಕ್ಷಣ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವ ಡಾ. ಶರಣಪ್ರಕಾಶ ಆರ್. ಪಾಟೀಲ, ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಡಾ. ಅಜಯಸಿಂಗ್, ಕರ್ನಾಟಕ ರೇಷ್ಮೆ ಉದ್ದಿಮೆಗಳ ನಿಗಮದ ಅಧ್ಯಕ್ಷೆ ಹಾಗೂ ಉತ್ತರ ಕ್ಷೇತ್ರದ ಶಾಸಕಿ ಕನೀಜ್ ಫಾತೀಮಾ ಮತ್ತು ಆಳಂದ ಶಾಸಕ ಹಾಗೂ ಕರ್ನಾಟಕ ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷ ಬಿ.ಆರ್.ಪಾಟೀಲ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಕಲಬುರಗಿ ದಕ್ಷಿಣ ಕ್ಷೇತ್ರದ ಶಾಸಕ ಅಲ್ಲಮಪ್ರಭು ಪಾಟೀಲ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.

ಕಲಬುರಗಿ ಲೋಕಸಭಾ ಸದಸ್ಯ ರಾಧಾಕೃಷ್ಣ ದೊಡ್ಡಮನಿ, ಬೀದರ್ ಲೋಕಸಭಾ ಸದಸ್ಯ ಸಾಗರ ಖಂಡ್ರೆ, ಶಾಸಕರಾದ ಎಂ.ವೈ. ಪಾಟೀಲ, ಬಸವರಾಜ ಮತ್ತಿಮಡು, ಡಾ. ಅವಿನಾಶ ಉಮೇಶ ಜಾಧವ, ವಿಧಾನ ಪರಿಷತ್ ಸದಸ್ಯರಾದ ಡಾ. ಬಿ.ಜಿ. ಪಾಟೀಲ, ತಿಮ್ಮಣ್ಣಪ್ಪ ಕಮಕನೂರ, ಶಶೀಲ ಜಿ. ನಮೋಶಿ, ಡಾ. ಚಂದ್ರಶೇಖರ ಪಾಟೀಲ ಹುಮನಾಬಾದ, ಜಗದೇವ ಗುತ್ತೇದಾರ್, ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಾಬುರಾವ್ ಚಿಂಚನಸೂರ, ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದ ಅಧ್ಯಕ್ಷ ದೇವಿಂದ್ರಪ್ಪ ಮರತೂರ, ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯ ಅಧ್ಯಕ್ಷ ಸೈಯದ್ ಮುಹಮ್ಮದ್ ಅಲಿ ಅಲ್ ಹುಸೇನಿ, ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಅಧ್ಯಕ್ಷ ಅರುಣಕುಮಾರ್ ಎಂ.ವೈ. ಪಾಟೀಲ, ಜೆಸ್ಕಾಂ ಅಧ್ಯಕ್ಷ ಪ್ರವೀಣ ಪಾಟೀಲ ಹರವಾಳ, ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮಜಹರ್ ಆಲಂ ಖಾನ್, ಕರ್ನಾಟಕ ರಾಜ್ಯ ದ್ವಿದಳ ಧಾನ್ಯ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಸೈಯ್ಯದ್ ಮಹೆಮೂದ್ ಚಿಸ್ತಿ ಸಾಹೇಬ್, ಅಚ್ಚುಕಟ್ಟು ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಅಬ್ದುಲ್ ರಶೀದ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಜಿಲ್ಲಾ ಅಧ್ಯಕ್ಷೆ ಚಂದ್ರಿಕಾ ಪರಮೇಶ್ವರ್ ಹಾಗೂ ಮಹಾನಗರ ಪಾಲಿಕೆ ಮಹಾಪೌರ ಅಜ್ಮಲ್ ಅಹ್ಮದ್ ಗೋಲಾ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಕಲಬುರಗಿ ಈಶಾನ್ಯ ವಲಯದ ಪೊಲೀಸ್ ಉಪ ಮಹಾನಿರೀಕ್ಷಕ ಶಾಂತನು ಸಿನ್ಹಾ, ಕಲಬುರಗಿ ವಿಭಾಗದ ಪ್ರಾದೇಶಿಕ ಆಯುಕ್ತೆ ಜಹೀರಾ ನಸೀವ್, ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಕಾರ್ಯದರ್ಶಿ ನಲಿನ್ ಅತುಲ್, ಕೆಕೆಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕಿ ಡಾ. ಬಿ. ಸುಶೀಲಾ, ಕಲಬುರಗಿ ಜೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಶಶಿಧರ್ ಕುರ್ರೇ, ಕೃಷಿಕಲ್ಪ ಎಸೆಲ್ ಅಧ್ಯಕ್ಷ ಹಾಗೂ ಸಂಸ್ಥಾಪಕ ಪಾಲುದಾರ ಡಾ. ಪ್ರಶಾಂತ ಪ್ರಕಾಶ ಮತ್ತು ಕೃಷಿಕಲ್ಪದ ಸಿಒಒ ಸಿ.ಎಂ. ಪಾಟೀಲ ವಿಶೇಷ ಆಹ್ವಾನಿತರಾಗಿ ಪಾಲ್ಗೊಳ್ಳಲಿದ್ದಾರೆ.

ಮಂಗಳೂರಿನಲ್ಲಿ ಸೈಬರ್ ವಂಚಕರ ಅಟ್ಟಹಾಸ: ಎಪಿಕೆ ಫೈಲ್, ಲೈಫ್ ಸರ್ಟಿಫಿಕೆಟ್, ಸಾಲದ ಆಮಿಷವೊಡ್ಡಿ ಮೂವರಿಂದ ₹4.91 ಲಕ್ಷ ಲೂಟಿ

ಮಂಗಳೂರು: ಮಂಗಳೂರಿನಲ್ಲಿ ಸೈಬರ್ ವಂಚಕರ ಜಾಲ ದಿನದಿಂದ ದಿನಕ್ಕೆ ಸಕ್ರಿಯವಾಗುತ್ತಿದ್ದು, ಪ್ರತ್ಯೇಕ ಮೂರು ಪ್ರಕರಣಗಳಲ್ಲಿ ಅಪರಿಚಿತ ವಂಚಕರು ನಕಲಿ ಎಪಿಕೆ ಫೈಲ್‌ಗಳು ಹಾಗೂ ಸಾಲದ ಆಮಿಷವೊಡ್ಡಿ ನಾಗರಿಕರಿಂದ ಒಟ್ಟು 4,91,782 ರೂ. ಲಪಟಾಯಿಸಿದ್ದಾರೆ. ಈ ಕುರಿತು ಮಂಗಳೂರು ಸಿಇಎನ್ ಅಪರಾಧ ಪೊಲೀಸ್ ಠಾಣೆಯಲ್ಲಿ ಮೂರು ಪ್ರತ್ಯೇಕ ಪ್ರಕರಣಗಳು ದಾಖಲಾಗಿವೆ ಎಂದು ಮಂಗಳೂರು ನಗರ ಪೊಲೀಸರ ಪ್ರಕಟಣೆ ತಿಳಿಸಿದೆ.

ಪ್ರಕರಣ 1: 29 ವರ್ಷದ ಯುವಕನೊಬ್ಬ ಬ್ಯಾಂಕ್ ಆಫ್ ಮಹಾರಾಷ್ಟ್ರದಲ್ಲಿ ಉಳಿತಾಯ ಖಾತೆ ಹೊಂದಿದ್ದಾರೆ. ನವೆಂಬರ್ 10ರಂದು ಮಧ್ಯಾಹ್ನ 3.31ರ ಸುಮಾರಿಗೆ ಅವರ ಖಾತೆಯಿಂದ 4 ಪ್ರತ್ಯೇಕ ವಹಿವಾಟುಗಳಲ್ಲಿ ಒಟ್ಟು 2,61,282 ರೂ. ಏಕಾಏಕಿ ಕಡಿತಗೊಂಡಿದೆ. ಈ ಬಗ್ಗೆ ಮನೆಯವರೊಂದಿಗೆ ಚರ್ಚಿಸಿ ಮೊಬೈಲ್ ಪರಿಶೀಲಿಸಿದಾಗ, ಅವರ ಫೋನ್‌ನಲ್ಲಿ '' ಎಂಬ ನಕಲಿ ಫೈಲ್ ಡೌನ್‌ಲೋಡ್ ಆಗಿರುವುದು ಬೆಳಕಿಗೆ ಬಂದಿದೆ. ಈ ಮಾಲ್‌ವೇರ್ ಮೂಲಕ ಹ್ಯಾಕರ್‌ಗಳು ಖಾತೆಗೆ ಕನ್ನ ಹಾಕಿದ್ದಾರೆ ಎಂದು ದೂರುದಾರರು ಸೈಬರ್ ಸಹಾಯವಾಣಿ 1930ಕ್ಕೆ ಕರೆ ಮಾಡಿ ದೂರು ದಾಖಲಿಸಿದ್ದಾರೆ.

ಪ್ರಕರಣ 2: 73 ವರ್ಷದ ಹಿರಿಯ ನಾಗರಿಕರೊಬ್ಬರು ನವೆಂಬರ್ 7ರಂದು ಮೊಬೈಲ್‌ನಲ್ಲಿ '' ಎಂಬ ಗೇಮಿಂಗ್ ಆ್ಯಪ್ ಆಡುತ್ತಿದ್ದಾಗ, ಬ್ಯಾಂಕ್ ಆಫ್ ಇಂಡಿಯಾ ಲೋಗೋ ಇರುವ 'ಲೈಫ್ ಸರ್ಟಿಫಿಕೆಟ್' (ಜೀವನ ಪ್ರಮಾಣ ಪತ್ರ) ಜಾಹೀರಾತು ಕಾಣಿಸಿಕೊಂಡಿತ್ತು. ಅದನ್ನು ಕ್ಲಿಕ್ ಮಾಡಿ ವಿವರ ಭರ್ತಿ ಮಾಡಿದಾಗ '' ತೋರಿಸಿತ್ತು.

ಬ್ಯಾಂಕ್ ಸಿಬ್ಬಂದಿ ಸೋಗಿನಲ್ಲಿ ಕರೆ: ತಕ್ಷಣವೇ ಕರೆ ಮಾಡಿದ ಅಪರಿಚಿತ ವ್ಯಕ್ತಿ, ತಾನು ಬ್ಯಾಂಕ್ ಆಫ್ ಇಂಡಿಯಾದ ಲೈಫ್ ಸರ್ಟಿಫಿಕೆಟ್ ವಿಭಾಗದ ಸಿಬ್ಬಂದಿ ಎಂದು ನಂಬಿಸಿದ್ದಾನೆ. ಬಳಿಕ ವಾಟ್ಸ್ಆ್ಯಪ್‌ಗೆ ಒಂದು ಫೈಲ್ ಕಳುಹಿಸಿ, ಅದರಲ್ಲಿ ವಿವರ ಭರ್ತಿ ಮಾಡಲು ತಿಳಿಸಿದ್ದಾನೆ. ವಂಚಕನ ಮಾತು ನಂಬಿ ಆ ಫೈಲ್ ಇನ್‌ಸ್ಟಾಲ್ ಮಾಡಿದ ಹಿರಿಯ ನಾಗರಿಕರು, ಅದರಲ್ಲಿ ತಮ್ಮ ವೈಯಕ್ತಿಕ ವಿವರ, ಡೆಬಿಟ್ ಕಾರ್ಡ್ ಮಾಹಿತಿ ಹಾಗೂ ಪಿನ್ ನಂಬರ್ ನಮೂದಿಸಿದ್ದಾರೆ. ಕೆಲವೇ ಕ್ಷಣಗಳಲ್ಲಿ ಅವರ ಮಂಗಳೂರು ಶಾಖೆಯ ಬ್ಯಾಂಕ್ ಆಫ್ ಇಂಡಿಯಾ ಖಾತೆಯಿಂದ ಹಂತ, ಹಂತವಾಗಿ 1,20,000 ರೂ. ವರ್ಗಾವಣೆಯಾಗಿದೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಪ್ರಕರಣ 3: 32 ವರ್ಷದ ಯುವಕರೊಬ್ಬರು ನವೆಂಬರ್ 9ರಂದು ಬೆಳಗ್ಗೆ ಇನ್‌ಸ್ಟಾಗ್ರಾಮ್‌ನಲ್ಲಿ ಕಂಡ 'ಲೋನ್ ಜಾಹೀರಾತು' ಕ್ಲಿಕ್ ಮಾಡಿ ತಮ್ಮ ಹೆಸರು, ವಿಳಾಸ ಮತ್ತು ಪ್ಯಾನ್ ಕಾರ್ಡ್ ವಿವರ ನಮೂದಿಸಿದ್ದರು.

ಇನ್ಸೂರೆನ್ಸ್, ಟ್ಯಾಕ್ಸ್ ಹೆಸರಿನಲ್ಲಿ ವಸೂಲಿ: ಅಂದು ಸಂಜೆ 4.30ಕ್ಕೆ ಕರೆ ಮಾಡಿದ ವ್ಯಕ್ತಿ, ತಾನು 'ಧನಿ ಫೈನಾನ್ಸ್ ಪ್ರೈವೇಟ್ ಲಿಮಿಟೆಡ್'ನಿಂದ ಮಾತನಾಡುತ್ತಿರುವುದಾಗಿ ಹೇಳಿ 5 ಲಕ್ಷ ರೂ. ಸಾಲ ಮಂಜೂರಾಗಿದೆ ಎಂದು ನಂಬಿಸಿದ್ದಾನೆ. ಬಳಿಕ ಇನ್ಸೂರೆನ್ಸ್ ಶುಲ್ಕವಾಗಿ 5,999 ರೂ. ಹಾಗೂ 'ಲೋನ್ ಟ್ಯಾಕ್ಸ್' ಹೆಸರಿನಲ್ಲಿ ಹಂತ ಹಂತವಾಗಿ 18,500, 29,999 ಹಾಗೂ 39,999 ರೂ. ಹಣವನ್ನು ಫೋನ್‌ಪೇ ಮೂಲಕ ವರ್ಗಾಯಿಸಿಕೊಂಡಿದ್ದಾನೆ.

ಯುವ ಸಂಸತ್ ಕಾರ್ಯಕ್ರಮದಲ್ಲಿ ಮರಗೋಳ ಕಾಲೇಜಿನ ವಿದ್ಯಾರ್ಥಿಗಳ ಉತ್ತಮ ಸಾಧನೆ

ಶಹಾಬಾದ್:

ನಗರದ ಸೇಂಟ್ ಥಾಮಸ್ ಶಾಲೆಯಲ್ಲಿ ಆಯೋಜಿಸಲಾಗಿದ್ದ ತಾಲೂಕು ಮಟ್ಟದ ಯುವ ಸಂಸತ್ ಕಾರ್ಯಕ್ರಮದಲ್ಲಿ ಎಸ್.ಎಸ್. ಮರಗೋಳ ಮಹಾವಿದ್ಯಾಲಯದ ವಿದ್ಯಾರ್ಥಿಗಳಾದ ಶಿವಕುಮಾರ ಅವರು ಅತ್ಯುತ್ತಮ ಮುಖ್ಯಮಂತ್ರಿ ಹಾಗೂ ಬಾಬು ಅವರು ಅತ್ಯುತ್ತಮ ವಿರೋಧ ಪಕ್ಷದ ನಾಯಕನಾಗಿ ಆಯ್ಕೆಯಾಗಿದ್ದಾರೆ. ಈ ಸಾಧನೆಗಾಗಿ ಕಾಲೇಜಿನ ವತಿಯಿಂದ ಇಬ್ಬರು ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.



ಈ ಸಂದರ್ಭದಲ್ಲಿ ಮಾತನಾಡಿದ ವಿದ್ಯಾರ್ಥಿ ಶಿವಕುಮಾರ, ಯುವ ಸಂಸತ್ ಕಾರ್ಯಕ್ರಮವು ವಿದ್ಯಾರ್ಥಿಗಳು ಮತ್ತು ಯುವಜನರಲ್ಲಿ ಸಂಸದೀಯ ವ್ಯವಸ್ಥೆ, ಪ್ರಜಾಪ್ರಭುತ್ವದ ಮೌಲ್ಯಗಳು ಹಾಗೂ ದೇಶದ ಕಾಯ್ದೆ-ನೀತಿಗಳ ಬಗ್ಗೆ ಅರಿವು ಮೂಡಿಸುವ ಪ್ರಮುಖ ವೇದಿಕೆಯಾಗಿದೆ. ತಾಲೂಕು ಮಟ್ಟದ ಯುವ ಸಂಸತ್ ಕಾರ್ಯಕ್ರಮದಲ್ಲಿ ಅತ್ಯುತ್ತಮ ಮುಖ್ಯಮಂತ್ರಿಯಾಗಿ ಆಯ್ಕೆಯಾಗಿರುವುದು ಸಂತಸ ತಂದಿದೆ ಎಂದರು.

ಇದಕ್ಕೆ ಮುಖ್ಯ ಕಾರಣ ನಮ್ಮ ಕಾಲೇಜಿನ ಪ್ರಾಂಶುಪಾಲರಾದ ಡಾ. ಬಸವರಾಜ ಹಿರೇಮಠ ಅವರು ಪಠ್ಯೇತರ ಚಟುವಟಿಕೆಗಳು ಮತ್ತು ಸ್ಪರ್ಧೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಲು ನೀಡುತ್ತಿರುವ ಪ್ರೇರಣೆ. ನನ್ನಲ್ಲಿರುವ ಪ್ರತಿಭೆಯನ್ನು ಗುರುತಿಸಿ ನಿರಂತರವಾಗಿ ಪ್ರೋತ್ಸಾಹಿಸುತ್ತಿದ್ದಾರೆ. ಅವರ ಮಾರ್ಗದರ್ಶನದ ಫಲವಾಗಿ ಇಂದು ಪ್ರಜಾಪ್ರಭುತ್ವದ ಮೌಲ್ಯಗಳನ್ನು ಅರಿಯಲು ಸಾಧ್ಯವಾಗಿದೆ ಎಂದು ಹೇಳಿದರು.

ಎಸ್.ಎಸ್. ಮರಗೋಳ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ. ಬಸವರಾಜ ಹಿರೇಮಠ ಮಾತನಾಡಿ, ನಮ್ಮ ಕಾಲೇಜಿನ ವಿದ್ಯಾರ್ಥಿಗಳು ತಾಲೂಕು ಮಟ್ಟದ ಯುವ ಸಂಸತ್ ಕಾರ್ಯಕ್ರಮದಲ್ಲಿ ಅತ್ಯುತ್ತಮ ಮುಖ್ಯಮಂತ್ರಿ ಹಾಗೂ ಅತ್ಯುತ್ತಮ ವಿರೋಧ ಪಕ್ಷದ ನಾಯಕನಾಗಿ ಆಯ್ಕೆಯಾಗಿರುವುದು ಅತೀವ ಸಂತಸ ತಂದಿದೆ. ವಿದ್ಯಾರ್ಥಿಗಳಲ್ಲಿರುವ ಪ್ರತಿಭೆಯನ್ನು ಗುರುತಿಸಿ ಪೋಷಿಸುವ ಕೆಲಸ ಎಲ್ಲರಿಂದಲೂ ಆಗಬೇಕು ಎಂದರು.

ಡಾ. ಬಿ.ಆರ್. ಅಂಬೇಡ್ಕರ್ ಅವರು ನೀಡಿದ ಸಂವಿಧಾನದ ಆಧಾರದಲ್ಲಿಯೇ ನಮ್ಮ ರಾಜಕೀಯ ವ್ಯವಸ್ಥೆ ಮತ್ತು ಪ್ರಜಾಪ್ರಭುತ್ವದ ಆಡಳಿತ ನಡೆಯುತ್ತಿದೆ. ವಿದ್ಯಾರ್ಥಿಗಳು ಪ್ರಜಾಪ್ರಭುತ್ವದ ಮೌಲ್ಯಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಆಡಳಿತ ಮತ್ತು ವಿರೋಧ ಪಕ್ಷಗಳ ಪಾತ್ರದ ಬಗ್ಗೆ ಅರಿವು ಮೂಡಿಸಿಕೊಳ್ಳುವುದರ ಜೊತೆಗೆ, ಪ್ರಶ್ನಿಸುವ ಗುಣವನ್ನೂ ಬೆಳೆಸಿಕೊಳ್ಳಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಕಾಲೇಜಿನ ಪ್ರಾಧ್ಯಾಪಕರು, ಉಪನ್ಯಾಸಕರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ನಿಮ್ಮೂರು ಸುದ್ದಿ

ಸಂಪಾದಕೀಯ



ಸಾರ್ವಜನಿಕ ಸಭ್ಯತೆ ಹಿನ್ನೆಲೆಗೆ; ಚಾಕು-ಚೂರಿ ಸಂಸ್ಕೃತಿ ಮುನ್ನೆಲೆಗೆ!

ಸಮಾಜಕ್ಕೆ ಇಂದು ಬೇಕಿರುವುದು ಚಾಕು-ಚೂರಿ ಹಿಡಿಯುವ ಕೈಗಳಲ್ಲ, ಕೈಕುಲುಕಿ ಸಮಸ್ಯೆ ಬಗೆಹರಿಸುವ ಮನಸ್ಸು ಗಳು. ಈ ಬದಲಾವಣೆ ಪ್ರತಿಯೊಂದು ಮನೆ, ಶಾಲೆ, ರಾಜಕೀಯ ವೇದಿಕೆ ಮತ್ತು ಸಾರ್ವಜನಿಕ ಸ್ಥಳದಿಂದ ಆರಂಭವಾಗಬೇಕು. ಇಲ್ಲದಿದ್ದರೆ ಸಭ್ಯತೆ ಹಿನ್ನೆಲೆಗೆ ಸರಿಯುತ್ತಲೇ ಇರುತ್ತದೆ; ಚಾಕು-ಚೂರಿ ಸಂಸ್ಕೃತಿ ಸಾರ್ವಜನಿಕ ಬದುಕಿನ ಮುನ್ನೆಲೆಯನ್ನು ಆಕ್ರಮಿಸಿಕೊಳ್ಳುತ್ತದೆ.

ಸಾರ್ವಜನಿಕ ಸಭೆಯೊಂದರಲ್ಲಿ ಬಿಜೆಪಿ ಮುಖಂಡ, ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿಯವರು, ಕಾಂಗ್ರೆಸ್ ಅನ್ನು ತುಂಡು ತುಂಡು ಮಾಡಿ ಸಮುದ್ರಕ್ಕೆ ಎಸೆಯುತ್ತೇವೆ ಎಂದು ಹೇಳಿದರು.

ಅವರ ಮಾತುಗಳನ್ನು ಗಂಭೀರವಾಗಿ ತೆಗೆದುಕೊಂಡ ಯುವ ಕಾಂಗ್ರೆಸ್ ಕಾರ್ಯಕರ್ತರು ಅವರ ಮನೆ ವಿಳಾಸಕ್ಕೆ ಚಾಕು-ಚೂರಿ ಪಾರ್ಸೆಲ್ ಕಳುಹಿಸಿ, ನಮ್ಮದು ಚಾಕು-ಚೂರಿ ಸಂಸ್ಕೃತಿ ಎನ್ನುವುದನ್ನು ಸಾಬೀತುಪಡಿಸಿದರು.

ಈ ಪ್ರಕರಣದ ಕೆಲವೇ ದಿನಗಳ ಹಿಂದೆ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಸುದ್ದಿಗಾರರೊಂದಿಗೆ ಮಾತನಾಡುತ್ತ, ಈ ನನ್ ಮಕ್ಕಳು ಕಾಂಗ್ರೆಸ್ನೋರು ಇದ್ದಾರಲ್ಲ ಎಂದರು.

ಆ ತಕ್ಷಣವೇ ಕಾಂಗ್ರೆಸ್ ಕಾರ್ಯಕರ್ತರು, ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಮತ್ತು ವಿಜಯೇಂದ್ರ ಅವರ ಮನೆ ಗೋಡೆಗೆ ವಿಜಯೇಂದ್ರನ ಮಕ್ಕಳು ಕಳ್ ನನ್ ಮಕ್ಕಳು ಎಂದು ಪೋಸ್ಟರ್ ಅಂಟಿಸಿ, ಕರುಳಿನ ಕೊಳಕನ್ನು ಕಾರಿಕೊಂಡರು.

ಇದಕ್ಕೂ ಸ್ವಲ್ಪ ಹಿಂದಕ್ಕೆ ಶುರುವಾದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರ ನಡುವಿನ ರಾಜಕೀಯ ವಾಕ್ಸ ಮರ ಇಂದಿಗೂ ನಿಂತಿಲ್ಲ. ಅಷ್ಟೇ ಅಲ್ಲ, ಇಬ್ಬರು ನಾಯಕರ ನಡುವಿನ ವಾಗ್ವಾದವು ವೈಯಕ್ತಿಕ ಟೀಕೆಗಿಳಿದು, ಕೊಳಕು ಭಾಷೆ, ಆಧಾರರಹಿತ ಆರೋಪ ಮತ್ತು ರಾಜಕೀಯ ದ್ವೇಷದ ಪ್ರದರ್ಶನವಾಗಿ ಬದಲಾಗಿದೆ.

ಜನಪ್ರತಿನಿಧಿಯಾದಾಗ, ಜನ ಗೌರವಿಸುವಾಗ, ವೇದಿಕೆಯಲ್ಲಿ ನಿಂತು ಮಾತನಾಡುವಾಗ ಸಾರ್ವಜನಿಕ ಸಭ್ಯತೆ, ಸಂಯಮ, ಶಿಷ್ಟಾಚಾರವನ್ನು ಪಾಲಿಸಬೇಕಾಗುತ್ತದೆ. ಅದರಲ್ಲೂ ಅವರು ಜನರೊಂದಿಗೆ ಬೆರೆತು ಕೆಲಸ ಮಾಡುವಾಗ, ಅವರ ನಡೆ ಮತ್ತು ನುಡಿಯನ್ನು ಸಾವಿರಾರು ಕಣ್ಣು-ಕಿವಿಗಳು ಗಮನಿಸುತ್ತವೆ ಎಂಬ ಎಚ್ಚರ ಇರಬೇಕಾಗುತ್ತದೆ. ಸೋಷಿಯಲ್ ಮೀಡಿಯಾದ ಈ ಹೊಸಗಾಲದಲ್ಲಿ, ಪ್ರತಿಯೊಬ್ಬರ ಕೈಯಲ್ಲೂ ಆಂಡ್ರಾಯ್ಡ್ ಫೋನ್‌ಗಳಿರುವಾಗ, ಪ್ರತಿ ಕ್ಷಣವೂ ರೆಕಾರ್ಡ್ ಆಗುವಾಗ- ಮೈಯೆಲ್ಲ ಕಣ್ಣಾಗಿರಬೇಕಾಗುತ್ತದೆ. ಜನಪ್ರತಿನಿಧಿಗಳಿಗೆ ಈ ಎಚ್ಚರ ಇಲ್ಲದೇ ಹೋದರೆ, ಅವರಾಡಿದ ಮಾತೇ ಅವರನ್ನು ನೇಣುಗಂಬಕ್ಕೇರಿಸುತ್ತದೆ. ಅದನ್ನು ನಾವು ಈಗ ಕರ್ನಾಟಕದಲ್ಲಿ ಕಾಣುತ್ತಿದ್ದೇವೆ.

ಇತ್ತೀಚಿನ ದಿನಗಳಲ್ಲಿ, ಸಾರ್ವಜನಿಕ ಬದುಕಿನಲ್ಲಿ ಕಾಣಿಸಿಕೊಳ್ಳುತ್ತಿರುವ ಕೆಲವು ಬೆಳವಣಿಗೆಗಳು ಆತಂಕ ಹುಟ್ಟಿಸುವಂತಿವೆ. ತಾಳ್ಮೆಯ ತಾವಿನಲ್ಲಿ ತಲ್ಲಣ, ಸಂವಾದದ ಸ್ಥಳದಲ್ಲಿ ಸಂಘರ್ಷ, ಪ್ರಜಾಸತ್ತಾತ್ಮಕ ಪ್ರತಿರೋಧದ ಪರಿಧಿಯಲ್ಲಿ ಬೆದರಿಕೆ ಮತ್ತು ಹಿಂಸಾ ಪ್ರವೃತ್ತಿ ಮುನ್ನೆಲೆಗೆ ಬರುತ್ತಿದೆ. ಮಾತಿನ ಚಕಮಕಿ ಚಾಕು ಇರಿತದಲ್ಲಿ ಅಂತ್ಯಗೊಳ್ಳುವುದು, ವೈಯಕ್ತಿಕ ವೈಷಮ್ಯ ಕೊಲೆಯಲ್ಲಿ ಕೊನೆಯಾಗುವುದು, ಸಣ್ಣ ವಿವಾದ ಗುಂಪುಗಳ ನಡುವಿನ ಸಂಘರ್ಷಕ್ಕೆ ತಿರುಗುವುದು- ಇವೆಲ್ಲವೂ ಕೇವಲ ಕಾನೂನು ಮತ್ತು ಸುವ್ಯವಸ್ಥೆಯ ಸಮಸ್ಯೆಗಳಲ್ಲ, ಇವು ನಮ್ಮ ಸಾಮಾಜಿಕ ಬದುಕಿನಲ್ಲಿರುವ ಆಳವಾದ ಅಸ್ವಸ್ಥತೆಯ ಲಕ್ಷಣಗಳು.

ಹಾಗೆಯೇ ಯಾರನ್ನಾದರೂ ಅವಮಾನಿಸುವುದು, ಬೆದರಿಸುವುದು, ವ್ಯಕ್ತಿತ್ವಹರಣ ಮಾಡುವುದು, ಧಾರ್ಮಿಕ ಮತ್ತು ಜಾತಿ ದ್ವೇಷವನ್ನು ಹರಡುವುದು ಕೆಲವರ ಪಾಲಿಗೆ ಸಾಮಾನ್ಯವಾಗುತ್ತಿದೆ. ದುರದೃಷ್ಟಕರ ಸಂಗತಿ ಎಂದರೆ, ರಾಜಕಾರಣದಲ್ಲಿ ಇದು ಮಿತಿಯಿಂದ ಅತಿಗೆ ಜಿಗಿದಿದೆ. ಅದರ ಪರಿಣಾಮ ಸಮಾಜದ ಎಲ್ಲ ಸ್ತರಗಳ ಮೇಲೂ ಬೀರುತ್ತಿದೆ.

ಮಾತು ಮತ್ತು ನಡವಳಿಕೆಯ ಮೂಲಕ ಸಮಾಜಕ್ಕೆ ಮಾದರಿಯಾಗಬೇಕಾದ ರಾಜಕೀಯ ನಾಯಕರಿಗೆ ಈಗ, ಸಾರ್ವಜನಿಕ ಬದುಕಿನಲ್ಲಿ ಸಂಯಮಕ್ಕಿಂತ ಆಕ್ರಮಣಶೀಲ ರಾಜಕೀಯ ಅರ್ಹತೆಯಂತೆ ಕಾಣತೊಡಗಿದೆ. ಅಧಿಕಾರದಲ್ಲಿರುವವರು ವಿರೋಧಿಗಳನ್ನು ಶತ್ರುಗಳಂತೆ ಕಾಣುವುದು, ಭಿನ್ನಾಭಿಪ್ರಾಯ ವ್ಯಕ್ತಪಡಿಸುವವರನ್ನು ಅವಮಾನಿಸುವುದು, ಬೆದರಿಕೆಯ ಭಾಷೆ ಬಳಸುವುದು, ರಾಜಕೀಯ ಎದುರಾಳಿಗಳ ವಿರುದ್ಧ ದ್ವೇಷ ಹರಡುವುದು- ಇವೆಲ್ಲವೂ ಕೆಳಮಟ್ಟದ ಸಾಮಾಜಿಕ ನಡವಳಿಕೆಗೆ ಪರೋಕ್ಷ ಪ್ರೋತ್ಸಾ ಹ ನೀಡುತ್ತಿವೆ.

ಪ್ರಜಾಪ್ರಭುತ್ವದಲ್ಲಿ ಭಿನ್ನಾಭಿಪ್ರಾಯ ಸಹಜ. ಪ್ರತಿಭಟನೆ, ಪ್ರತಿರೋಧ ಮತ್ತು ಪ್ರಶ್ನಿಸುವುದು ಕೂಡ ಸಾಮಾನ್ಯ. ಆದರೆ ಭಿನ್ನಾಭಿಪ್ರಾಯವನ್ನು ಹಿಂಸೆಯ ಮೂಲಕ ಹತ್ತಿಕ್ಕುವ ಪ್ರವೃತ್ತಿ ಹೆಚ್ಚಾಗುತ್ತಿದೆ. ಇದು ಪ್ರಜಾಪ್ರಭುತ್ವದ ಆಶಯಗಳಿಗೇ ವಿರುದ್ಧವಾದುದು. ಎದುರಾಳಿಯನ್ನು ಸೋಲಿಸಲು ಸಂವಾದ ಬೇಕೇ ಹೊರತು ಚಾಕು ಅಲ್ಲ. ಅನ್ಯಾಯದ ವಿರುದ್ಧ ಹೋರಾಡಲು ಸಂಘಟಿತ ಧ್ವನಿ ಬೇಕೇ ಹೊರತು ಮಾರಕಾಸ್ತ್ರವಲ್ಲ.

ನಾಗರಿಕತೆ ಎಂದರೆ ಇನ್ನೊಬ್ಬರನ್ನು ಹೆದರಿಸುವುದಲ್ಲ, ಇನ್ನೊಬ್ಬರ ಸ್ವಾತಂತ್ರ್ಯವನ್ನು ಗೌರವಿಸುವುದು. ಬಲಿಷ್ಠ ಸಮಾಜವೆಂದರೆ ಆಯುಧಗಳನ್ನು ಹೆಚ್ಚು ಹೊಂದಿರುವುದಲ್ಲ, ತನ್ನ ನಾಗರಿಕರು ಆಯುಧಗಳ ಮೊರೆ ಹೋಗದಂತೆ ಸಂಘರ್ಷವನ್ನು ಶಮನಗೊಳಿಸುವುದು. ಸಾರ್ವಜನಿಕ ಸಭ್ಯತೆಯನ್ನು ದುರ್ಬಲವೆಂದು ಭಾವಿಸಿ, ಆಕ್ರಮಣಶೀಲತೆಯನ್ನು ಶೌರ್ಯವೆಂದು ಬಿಂಬಿಸುವ ಪ್ರವೃತ್ತಿಗೆ ಕಡಿವಾಣ ಹಾಕದಿದ್ದರೆ, ಮುಂದಿನ ತಲೆಮಾರಿಗೆ ನಾವು ಬಿಟ್ಟುಹೋಗುವುದು ನಾಗರಿಕ ಸಮಾಜವನ್ನಲ್ಲ, ಭಯದ ವಾತಾವರಣವನ್ನು.

ಸಮಾಜಕ್ಕೆ ಇಂದು ಬೇಕಿರುವುದು ಚಾಕು-ಚೂರಿ ಹಿಡಿಯುವ ಕೈಗಳಲ್ಲ, ಕೈಕುಲುಕಿ ಸಮಸ್ಯೆ ಬಗೆಹರಿಸುವ ಮನಸ್ಸು ಗಳು. ಈ ಬದಲಾವಣೆ ಪ್ರತಿಯೊಂದು ಮನೆ, ಶಾಲೆ, ರಾಜಕೀಯ ವೇದಿಕೆ ಮತ್ತು ಸಾರ್ವಜನಿಕ ಸ್ಥಳದಿಂದ ಆರಂಭವಾಗಬೇಕು. ಇಲ್ಲದಿದ್ದರೆ ಸಭ್ಯತೆ ಹಿನ್ನೆಲೆಗೆ ಸರಿಯುತ್ತಲೇ ಇರುತ್ತದೆ; ಚಾಕು-ಚೂರಿ ಸಂಸ್ಕೃತಿ ಸಾರ್ವಜನಿಕ ಬದುಕಿನ ಮುನ್ನೆಲೆಯನ್ನು ಆಕ್ರಮಿಸಿಕೊಳ್ಳುತ್ತದೆ.

ಅದರಲ್ಲೂ ರಾಜಕಾರಣವೆಂದರೆ, ಜನ ಮೂಗು ಮುರಿಯುವ, ನಮಗ್ಯಾಕೆ ಎಂದು ದೂರ ಸರಿಯುವ, ಕುಲಗೆಟ್ಟು ಹೋಗಿದೆ ಎಂದು ತುಚ್ಛೀಕರಿಸುವ ಈ ದುರಿತ ಕಾಲದಲ್ಲಿ ರಾಜಕಾರಣಿಗಳು ಬಯಲಿಗೆ ಬಂದು ಬೆತ್ತಲಾದರೆ, ಯುವಸಮೂಹ ರಾಜಕಾರಣದತ್ತ ಒಲವು ತೋರುವುದು ಸಾಧ್ಯವೇ? ಅಥವಾ ಇದು ಅವರನ್ನು ರಾಜಕಾರಣದತ್ತ ತಲೆ ಹಾಕದಂತೆ ಈ ಸಭ್ಯರು ಹೆಣೆಯುತ್ತಿರುವ ತಂತ್ರವೇ?

ಸದ್ಯ ರಾಜ್ಯವನ್ನು ಭೀಕರ ಬರ, ಬೆಲೆ ಏರಿಕೆ, ನಿರುದ್ಯೋಗ, ವಲಸೆಯಂತಹ ಜ್ವಲಂತ ಸಮಸ್ಯೆಗಳು ಸುಡುತ್ತಿವೆ. ಬಡವರ ಬದುಕು ಉರಿದುರಿದು ಬೂದಿಯಾಗುತ್ತಿದೆ. ಜನರ ಬದುಕಿನ ಬಗ್ಗೆ ಚಿಂತಿಸಬೇಕಾದ ಮುಖ್ಯಮಂತ್ರಿ ಶಿವಕುಮಾರ್, ಆಳುವ ಸರ್ಕಾರದ ಲೋಪದೋಷಗಳನ್ನು ದಾಖಲೆಗಳ ಸಮೇತ ಎತ್ತಿಟ್ಟು ಪ್ರಶ್ನಿಸಬೇಕಾದ ಕೇಂದ್ರ ಸಚಿವ ಕುಮಾರಸ್ವಾಮಿ, ವಿರೋಧ ಪಕ್ಷದ ನಾಯಕರಾದ ಛಲವಾದಿ ನಾರಾಯಣಸ್ವಾಮಿ ಮತ್ತು ವಿಜಯೇಂದ್ರರು ಸಿಕ್ಕ ಅವಕಾಶವನ್ನು, ಅಸಹ್ಯ ಹೊರಹಾಕಲು ಬಳಸಿಕೊಂಡರೆ, ಅದೇ ರಾಜಕಾರಣವಾದರೆ- ಕರ್ನಾಟಕ ಕೂಡ ಉತ್ತರ ಭಾರತದ ಬಿಹಾರ-ಉತ್ತರ ಪ್ರದೇಶಗಳಂತಾಗುವುದರಲ್ಲಿ ದೂರವಿಲ್ಲ.

ಪತ್ರಿಕೆ ಓದುವ ಹವ್ಯಾಸ ಬೆಳಸಿಕೊಳ್ಳಿ

ಅಡ್ವಾಣಿ ಅಧಿಕಾರದ ಆಟದಲ್ಲಿ ಸಿದ್ಧಾಂತವೂ ಒಂದು ಮೆಟ್ಟಿಲಷ್ಟೇ!

1984ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಗೆದ್ದಿದ್ದು ಕೇವಲ ಎರಡು ಸ್ಥಾನಗಳು. ಅಲ್ಲಿಂದ ಪಕ್ಷವನ್ನು ರಾಷ್ಟ್ರೀಯ ಅಧಿಕಾರದ ಕೇಂದ್ರಕ್ಕೆ ತರುವಲ್ಲಿ ಅಡ್ವಾಣಿ ಅವರ ಪಾತ್ರ ದೊಡ್ಡದು. ರಥಯಾತ್ರೆ, ರಾಮಮಂದಿರ ಚಳವಳಿ ಮತ್ತು ಹಿಂದುತ್ವದ ರಾಜಕಾರಣದ ಮೂಲಕ ಅವರು ಪಕ್ಷಕ್ಕೆ ಹೊಸ ರಾಜಕೀಯ ನೆಲೆಯನ್ನು ಸೃಷ್ಟಿಸಿದರು. ಆದರೆ ಇಲ್ಲಿ ಒಂದು ಪ್ರಶ್ನೆ ಕೇಳಲೇಬೇಕು. ಈ ರಾಜಕೀಯ ಬೆಳವಣಿಗೆಯ ಲಾಭ ಯಾರಿಗೆ ಸಿಕ್ಕಿತು? ಸಮಾಜದ ಕಟ್ಟಕಡೆಯ ಜನರಿಗೆ, ಬಡವರಿಗೆ, ದಲಿತರಿಗೆ, ಹಿಂದುಳಿದವರಿಗೆ, ಕಾರ್ಮಿಕರಿಗೆ ಮತ್ತು ರೈತರಿಗೆ ಸಮಾನವಾಗಿ ಅಧಿಕಾರದ ಪಾಲು ದೊರೆಯಿತೇ?

ಭಾರತೀಯ ರಾಜಕಾರಣದಲ್ಲಿ ಎಲ್.ಕೆ. ಅಡ್ವಾಣಿ ಅವರ ಕಥೆಯನ್ನು ಒಬ್ಬ ಹಿರಿಯ ನಾಯಕನ ರಾಜಕೀಯ ಏಳುಬೀಳಿನ ಕಥೆಯೆಂದು ಮಾತ್ರ ನೋಡಬಾರದು. ಅದು ಸಿದ್ಧಾಂತದ ಹೆಸರಿನಲ್ಲಿ ಜನರನ್ನು ಸಂಘಟಿಸಿ, ಧಾರ್ಮಿಕ ಭಾವನೆಗಳನ್ನು ರಾಜಕೀಯ ಶಕ್ತಿಯನ್ನಾಗಿ ಪರಿವರ್ತಿಸಿ, ಕೊನೆಗೆ ಅಧಿಕಾರದ ಗದ್ದುಗೆ ತಲುಪಿದ ಸಂಘಟನೆಯೊಂದರ ಒಳರಾಜಕಾರಣದ ಕಥೆ ಕೂಡ ಹೌದು.

ಅಡ್ವಾಣಿ ಅವರು ಕಟ್ಟಿದ ರಾಜಕೀಯ ಕಟ್ಟಡದಲ್ಲಿ ಕೊನೆಗೆ ಅವರಿಗೇ ಜಾಗವಿಲ್ಲದಂತಾಯಿತು. ರಾಜಕೀಯದಲ್ಲಿ ಇದಕ್ಕಿಂತ ದೊಡ್ಡ ವ್ಯಂಗ್ಯ ಬೇಕೇ?

1984ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಗೆದ್ದಿದ್ದು ಕೇವಲ ಎರಡು ಸ್ಥಾನಗಳು. ಅಲ್ಲಿಂದ ಪಕ್ಷವನ್ನು ರಾಷ್ಟ್ರೀಯ ಅಧಿಕಾರದ ಕೇಂದ್ರಕ್ಕೆ ತರುವಲ್ಲಿ ಅಡ್ವಾಣಿ ಅವರ ಪಾತ್ರ ದೊಡ್ಡದು. ರಥಯಾತ್ರೆ, ರಾಮಮಂದಿರ ಚಳವಳಿ ಮತ್ತು ಹಿಂದುತ್ವದ ರಾಜಕಾರಣದ ಮೂಲಕ ಅವರು ಪಕ್ಷಕ್ಕೆ ಹೊಸ ರಾಜಕೀಯ ನೆಲೆಯನ್ನು ಸೃಷ್ಟಿಸಿದರು.

ಆದರೆ ಇಲ್ಲಿ ಒಂದು ಪ್ರಶ್ನೆ ಕೇಳಲೇಬೇಕು. ಈ ರಾಜಕೀಯ ಬೆಳವಣಿಗೆಯ ಲಾಭ ಯಾರಿಗೆ ಸಿಕ್ಕಿತು? ಸಮಾಜದ ಕಟ್ಟಕಡೆಯ ಜನರಿಗೆ, ಬಡವರಿಗೆ, ದಲಿತರಿಗೆ, ಹಿಂದುಳಿದವರಿಗೆ, ಕಾರ್ಮಿಕರಿಗೆ ಮತ್ತು ರೈತರಿಗೆ ಸಮಾನವಾಗಿ ಅಧಿಕಾರದ ಪಾಲು ದೊರೆಯಿತೇ? ಅಥವಾ ಈಗಾಗಲೇ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕವಾಗಿ ಮೇಲ್ಮಟ್ಟದಲ್ಲಿದ್ದ, ಸಂಖ್ಯೆಯಲ್ಲಿ ಅಲ್ಪವಾಗಿದ್ದ ವರ್ಗಗಳ ಪ್ರಭಾವ ಮತ್ತು ಪ್ರಾಬಲ್ಯ ಮತ್ತಷ್ಟು ಗಟ್ಟಿಯಾಯಿತೇ? ಉದ್ಯೋಗ, ಬಡತನ, ಶಿಕ್ಷಣ, ಆರೋಗ್ಯ ಮತ್ತು ಸಾಮಾಜಿಕ ನ್ಯಾಯದ ಪ್ರಶ್ನೆಗಳು ಧಾರ್ಮಿಕ ರಾಜಕಾರಣದ ಅಬ್ಬರದಲ್ಲಿ ಹಿಂದೆ ಸರಿದವೇ? ಮತದಾರನಿಗೆ ಧಾರ್ಮಿಕ ಗುರುತು ಸಿಕ್ಕಿತು; ಆದರೆ ಆತನ ಬದುಕಿಗೆ ಬೇಕಾದ ಸಾಮಾಜಿಕ ನ್ಯಾಯವೂ ಸಿಕ್ಕಿತೇ ಎಂಬ ಪ್ರಶ್ನೆ ಇಂದಿಗೂ ಉಳಿದಿದೆ.

ಇದು ಅಡ್ವಾಣಿಯವರನ್ನು ವೈಯಕ್ತಿಕವಾಗಿ ದೂಷಿಸುವ ಪ್ರಶ್ನೆಯಲ್ಲ. ಅವರು ಕಟ್ಟಿದ ರಾಜಕೀಯ ಮಾದರಿಯ ಸಾಮಾಜಿಕ ಪರಿಣಾಮವನ್ನು ಅಳೆಯುವ ಪ್ರಶ್ನೆ.

ವಾಜಪೇಯಿ ಎಂಬ ಮುಖ, ಅಡ್ವಾಣಿ ಎಂಬ ರಾಜಕೀಯ ಎಂಜಿನ್!

1990ರ ದಶಕದಲ್ಲಿ ಬಿಜೆಪಿ ಅಧಿಕಾರದ ಸಮೀಪಕ್ಕೆ ಬಂದಾಗ ಒಂದು ಸಮಸ್ಯೆ ಎದುರಾಯಿತು. ಹಿಂದುತ್ವದ ರಾಜಕೀಯದಿಂದ ಮಾತ್ರ ದೇಶದ ಎಲ್ಲ ಪಕ್ಷಗಳ ಬೆಂಬಲ ಪಡೆಯಲು ಸಾಧ್ಯವಿರಲಿಲ್ಲ. ಸಮ್ಮಿಶ್ರ ಸರ್ಕಾರ ರಚಿಸಬೇಕಿತ್ತು. ಆಗ ಅಟಲ್ ಬಿಹಾರಿ ವಾಜಪೇಯಿ ಅವರ ಉದಾರವಾದಿ, ಮಧ್ಯಮಮಾರ್ಗಿ ವ್ಯಕ್ತಿತ್ವವನ್ನು ಮುಂದೆ ತರಲಾಯಿತು.

! ವಾಜಪೇಯಿ ಅವರು ಮೈತ್ರಿಪಕ್ಷಗಳಿಗೆ ಸ್ವೀಕಾರಾರ್ಹ ಮುಖವಾಗಿದ್ದರು. ಅಡ್ವಾಣಿ ಅವರು ಪಕ್ಷದ ಮೂಲ ಸೈದ್ಧಾಂತಿಕ ನೆಲೆಯನ್ನು ಗಟ್ಟಿಗೊಳಿಸುವ ನಾಯಕರಾಗಿದ್ದರು.

ಒಂದು ರೀತಿಯಲ್ಲಿ ಹೇಳುವುದಾದರೆ, ರಾಜಕೀಯ ಅಂಗಡಿಗೆ ಹೊರಗೆ ಆಕರ್ಷಕ ಫಲಕ ಬೇಕಿತ್ತು; ಒಳಗೆ ಸಂಘಟನೆಯ ಮೂಲ ಸರಕು ಕೂಡ ಇರಬೇಕಿತ್ತು!

ಇಲ್ಲಿ ಆರ್‌ಎಸ್‌ಎಸ್‌ನ ಪಾತ್ರವನ್ನು ಕಡೆಗಣಿಸಲಾಗದು. ಬಿಜೆಪಿಯ ಬೆಳವಣಿಗೆಯಲ್ಲಿ ಅದರ ಸೈದ್ಧಾಂತಿಕ ಮತ್ತು ಸಂಘಟನಾತ್ಮಕ ಪ್ರಭಾವ ಮಹತ್ವದ್ದಾಗಿದೆ. ಆದರೆ ಈ ಸಂಬಂಧವನ್ನು ಕೇವಲ ಗುರು-ಶಿಷ್ಯರ ಸಂಬಂಧವೆಂದು ಭಾವಿಸುವುದು ತಪ್ಪು. ಅದು ಗುರಿ, ಸಂಘಟನೆ, ನಾಯಕತ್ವ ಮತ್ತು ಅಧಿಕಾರದ ನಡುವಿನ ನಿರಂತರ ರಾಜಕೀಯ ಹೊಂದಾಣಿಕೆಯ ಸಂಬಂಧವೂ ಹೌದು.

ವಾಜಪೇಯಿ ಅವರ ಮುಖಾಂತರ ಮಧ್ಯಮವರ್ಗದ ಮತ್ತು ಮೈತ್ರಿಪಕ್ಷಗಳ ವಿಶ್ವಾಸ ಗಳಿಸುವುದು, ಅಡ್ವಾಣಿ ಅವರ ಮೂಲಕ ಮೂಲ ಮತದಾರರ ನೆಲೆಯನ್ನು ಉಳಿಸಿಕೊಳ್ಳುವುದು ಎಂಬ ಎರಡು ಹಳಿಗಳ ಮೇಲೆ ಬಿಜೆಪಿ ತನ್ನ ರಾಜಕೀಯ ರೈಲನ್ನು ಓಡಿಸಿತು.

ಆದರೆ ರೈಲು ಅಧಿಕಾರದ ನಿಲ್ದಾಣ ತಲುಪಿದ ಮೇಲೆ ಚಾಲಕನಿಗೆ ಎಷ್ಟು ಗೌರವ ಸಿಗುತ್ತದೆ ಎಂಬುದನ್ನು ನಿರ್ಧರಿಸುವುದು ಪ್ರಯಾಣಿಕರಲ್ಲ; ರೈಲಿನ ಮಾಲೀಕರು!

ಅಡ್ವಾಣಿ ಅವರಿಗೆ ಅಧಿಕಾರದ ಮೆಟ್ಟಿಲು, ಮೋದಿಗೆ ಅಧಿಕಾರದ ಸಿಂಹಾಸನ!


2014ರಲ್ಲಿ ರಾಜಕೀಯದ ಚಿತ್ರಣ ಬದಲಾಯಿತು. ಸಮ್ಮಿಶ್ರ ಸರ್ಕಾರಗಳ ಅನಿವಾರ್ಯತೆ ಕಡಿಮೆಯಾಯಿತು. ಬಿಜೆಪಿಗೆ ಸ್ವಂತ ಬಹುಮತ ಪಡೆಯುವ ಅವಕಾಶ ಸಿಕ್ಕಿತು. ಈ ಬದಲಾವಣೆಯನ್ನು ಪಕ್ಷ ಮತ್ತು ಆರ್‌ಎಸ್‌ಎಸ್ ತಮ್ಮ ಸಂಘಟನಾತ್ಮಕ ಶಕ್ತಿಯ ಮೂಲಕ ಬಳಸಿಕೊಂಡವು.

ನರೇಂದ್ರ ಮೋದಿ ಅವರಲ್ಲಿ ಅಭಿವೃದ್ಧಿಯ ಭರವಸೆ, ಬಲಿಷ್ಠ ನಾಯಕತ್ವದ ಚಿತ್ರಣ ಮತ್ತು ಹಿಂದುತ್ವದ ರಾಜಕೀಯವನ್ನು ಒಟ್ಟಿಗೆ ಪ್ರದರ್ಶಿಸುವ ಅವಕಾಶ ಕಂಡವು.

ಇಲ್ಲೊಂದು ಆಸಕ್ತಿದಾಯಕ ಸಂಗತಿಯಿದೆ. ಹಿಂದೆ ಪಕ್ಷಕ್ಕೆ ರಾಷ್ಟ್ರೀಯ ಸ್ವೀಕಾರಾರ್ಹತೆ ತಂದುಕೊಡಲು ವಾಜಪೇಯಿ ಬೇಕಾಗಿದ್ದರು. ಪಕ್ಷದ ಮೂಲ ಸೈದ್ಧಾಂತಿಕ ನೆಲೆಯನ್ನು ಗಟ್ಟಿಗೊಳಿಸಲು ಅಡ್ವಾಣಿ ಬೇಕಾಗಿದ್ದರು. ಈಗ ಈ ಎರಡೂ ಪಾತ್ರಗಳನ್ನು ಒಬ್ಬರಲ್ಲೇ ಒಗ್ಗೂಡಿಸಬಹುದು (-) ಎಂಬ ರಾಜಕೀಯ ಲೆಕ್ಕಾಚಾರಕ್ಕೆ ಆದ್ಯತೆ ದೊರೆಯಿತು.

ಇದನ್ನೇ ರಾಜಕೀಯ ಭಾಷೆಯಲ್ಲಿ ನಾಯಕತ್ವದ ಕೇಂದ್ರೀಕರಣ ಎನ್ನಬಹುದು. ಸರಳ ಭಾಷೆಯಲ್ಲಿ ಹೇಳುವುದಾದರೆ, ಮೊದಲು ಎಲ್ಲರೂ ಸೇರಿ ನಿರ್ಧಾರ ಮಾಡುತ್ತಿದ್ದರು; ಈಗ ಒಬ್ಬರು ನಿರ್ಧಾರ ಮಾಡುತ್ತಾರೆ, ಉಳಿದವರು ಅದಕ್ಕೆ ಚಪ್ಪಾಳೆ ತಟ್ಟುತ್ತಾರೆ ಎಂಬ ಆರೋಪಕ್ಕೆ ಅವಕಾಶ ಸೃಷ್ಟಿಯಾಯಿತು.

ಅಡ್ವಾಣಿ, ಮುರಳಿ ಮನೋಹರ ಜೋಶಿ ಸೇರಿದಂತೆ ಹಳೆಯ ತಲೆಮಾರಿನ ನಾಯಕರು ಮಾರ್ಗದರ್ಶಕ ಮಂಡಳಿಗೆ ಸೇರಿಸಲ್ಪಟ್ಟರು. ಹೆಸರಿನಲ್ಲಿ ಮಾರ್ಗದರ್ಶಕರು; ಆದರೆ ಪಕ್ಷದ



ದಿಕ್ಕು ನಿರ್ಧರಿಸುವ ಅಧಿಕಾರ ಎಷ್ಟು ಉಳಿದಿತ್ತು?

ರಾಜಕೀಯದಲ್ಲಿ ನಿವೃತ್ತಿ ಪ್ರಕಟಿಸದೆ ನಿವೃತ್ತಿಗೊಳಿಸುವುದಕ್ಕೂ ಒಂದು ಸುಂದರ ಹೆಸರು ಇದೆ. ಅದೇ ಮಾರ್ಗದರ್ಶಕ ಮಂಡಳಿ!

ಜಿನ್ನಾ ಪ್ರಕರಣ: ಸಿದ್ಧಾಂತದ ಗಡಿ ದಾಟಿದಾಗ ಸಂಘಟನೆ ಕೊಟ್ಟ ಶಿಕ್ಷೆ!

ಅಡ್ವಾಣಿ ಅವರ ರಾಜಕೀಯ ಬದುಕಿನ ಅತ್ಯಂತ ಮಹತ್ವದ ತಿರುವು 2005ರ ಪಾಕಿಸ್ತಾನ ಪ್ರವಾಸ. ಕರಾಚಿಯಲ್ಲಿ ಮೊಹಮ್ಮದ್ ಅಲಿ ಜಿನ್ನಾ ಅವರ ಸಮಾಧಿಗೆ ಭೇಟಿ ನೀಡಿ, ಅವರನ್ನು ಜಾತ್ಯತೀತ ನಾಯಕನೆಂದು ಬಣ್ಣಿಸುವ ರೀತಿಯ ಹೇಳಿಕೆ ನೀಡಿದರು. ಇದು ಬಿಜೆಪಿಯ ಮತ್ತು ಆರ್‌ಎಸ್‌ಎಸ್‌ನ ಮೂಲ ಸೈದ್ಧಾಂತಿಕ ನಿಲುವಿಗೆ ವಿರುದ್ಧವೆಂದು ಪರಿಗಣಿಸಲಾಯಿತು.

ಪರಿಣಾಮ? ಪಕ್ಷದ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಬೇಕಾದ ಪರಿಸ್ಥಿತಿ ಎದುರಾಯಿತು.

ಇಲ್ಲಿ ಒಂದು ದೊಡ್ಡ ರಾಜಕೀಯ ಪ್ರಶ್ನೆಯಿದೆ. ಅಡ್ವಾಣಿ ಅವರು ತಮ್ಮ ರಾಜಕೀಯ ಬದುಕಿನ ಬಹುಭಾಗವನ್ನು ಜಿನ್ನಾ ಅವರನ್ನು ವಿಭಜನೆಯ ರಾಜಕಾರಣದ ಸಂಕೇತವಾಗಿ ಚಿತ್ರಿಸುವ ರಾಜಕೀಯ ವಾತಾವರಣದಲ್ಲೇ ಬೆಳೆಸಿದ್ದರು. ಆದರೆ ಒಮ್ಮೆ ಜಿನ್ನಾ ಬಗ್ಗೆ ಬೇರೆ ರೀತಿಯ ಅಭಿಪ್ರಾಯ ವ್ಯಕ್ತಪಡಿಸಿದಾಗ ಅದೇ ಸಂಘಟನೆಯೊಳಗೆ ತೀವ್ರ ವಿರೋಧ ಎದುರಿಸಬೇಕಾಯಿತು.

ಅಂದರೆ, ನಾಯಕನಿಗೆ ಅಭಿಪ್ರಾಯ ವ್ಯಕ್ತಪಡಿಸುವ ಸ್ವಾತಂತ್ರ್ಯ ಎಷ್ಟಿದೆ? ಸಂಘಟನೆಯ ಸಿದ್ಧಾಂತಕ್ಕೆ ಅನುಕೂಲವಾದಾಗ ಮಾತ್ರವೇ ಉದಾರವಾದಿಯಾಗಬಹುದೇ? ಸಿದ್ಧಾಂತವನ್ನು ಪ್ರಶ್ನಿಸಿದರೆ ಆ ನಾಯಕನ ರಾಜಕೀಯ ಸ್ಥಾನಮಾನವೇ ( ) ಪ್ರಶ್ನೆಗೆ ಒಳಗಾಗುತ್ತದೆಯೇ?

ಇದು ಕೇವಲ ಅಡ್ವಾಣಿಯವರ ವೈಯಕ್ತಿಕ ಸಮಸ್ಯೆಯಲ್ಲ. ಸಂಘಟನೆಯೊಳಗಿನ ಭಿನ್ನಾಭಿಪ್ರಾಯದ ಸ್ವಾತಂತ್ರ್ಯದ ಪ್ರಶ್ನೆಯೂ ಹೌದು.

ಅಡ್ವಾಣಿ ಅವರು ಒಂದು ಕಾಲದಲ್ಲಿ ಕಟ್ಟರ್ () ಹಿಂದುತ್ವದ ರಾಜಕೀಯದ ಮುಖವಾಗಿದ್ದರು. ನಂತರ ಜಿನ್ನಾ ಬಗ್ಗೆ ಉದಾರವಾದಿ ಮಾತು ಆಡಿದಾಗ ಅದೇ ರಾಜಕೀಯ ವ್ಯವಸ್ಥೆ ಅವರಿಗೆ ಪಾಠ ಕಲಿಸಿತು. ಸಿದ್ಧಾಂತದ ಕಾವಲುಗಾರರಾಗಿದ್ದವರಿಗೆ ಸಿದ್ಧಾಂತದ ಗಡಿ ದಾಟುವ ಸ್ವಾತಂತ್ರ್ಯವೂ ಇರಲಿಲ್ಲವೇನೋ!

ಅಡ್ವಾಣಿಯವರ ಬಗ್ಗೆ ಅನುಕಂಪ ತೋರಿಸುವವರು ಯಾರು? ಏಕೆ?

ಇಂದು ಎಡಪಂಥೀಯರು, ಜಾತ್ಯತೀತ ಚಿಂತಕರು ಮತ್ತು ಪ್ರಜಾಪ್ರಭುತ್ವವಾದಿಗಳು ಅಡ್ವಾಣಿಯವರ ರಾಜಕೀಯ ಸ್ಥಿತಿಯನ್ನು ಚರ್ಚಿಸಿದಾಗ ಅದನ್ನು ಅವರ ಮೇಲಿನ ಪ್ರೀತಿಯೆಂದು ತಿಳಿಯಬಾರದು.

ಅಡ್ವಾಣಿ ಅವರ ರಾಜಕೀಯ ಸಿದ್ಧಾಂತದೊಂದಿಗೆ ಒಪ್ಪಿಕೊಳ್ಳದವರಿಗೂ ಅವರ ರಾಜಕೀಯ ಅಪ್ರಸ್ತುತತೆಯ ಬಗ್ಗೆ ಮಾತನಾಡುವ ಹಕ್ಕಿದೆ. ಏಕೆಂದರೆ ಇಲ್ಲಿ ಪ್ರಶ್ನೆ ಒಬ್ಬ ವ್ಯಕ್ತಿಗೆ ಅನ್ಯಾಯವಾಯಿತೇ ಎಂಬುದಕ್ಕಿಂತ ದೊಡ್ಡದು.

ಅಡ್ವಾಣಿ ಅವರು ಬೆಳೆಸಿದ ರಾಜಕೀಯ ಧ್ರುವೀಕರಣದ ಮಾದರಿಯೇ ಮುಂದೆ ಅವರ ರಾಜಕೀಯ ಪ್ರಭಾವವನ್ನು ಕಡಿಮೆ ಮಾಡುವ ವ್ಯವಸ್ಥೆಯ ಭಾಗವಾಯಿತು ( ). ಅವರು ಬಲಪಡಿಸಿದ ಸಂಘಟನೆ ವ್ಯಕ್ತಿಗಿಂತ ದೊಡ್ಡದಾಯಿತು. ವ್ಯಕ್ತಿಯ ಕೊಡುಗೆಗಿಂತ ಸಂಘಟನೆಯ ಪ್ರಸ್ತುತ ಅಗತ್ಯ ಮುಖ್ಯವಾಯಿತು.

ಆದರೆ ಒಂದು ವಿಷಯವನ್ನು ಮರೆಯಬಾರದು. ಅಡ್ವಾಣಿಯವರನ್ನು ಪಕ್ಕಕ್ಕೆ ಸರಿಸಲಾಯಿತು ಎಂಬ ಕಾರಣಕ್ಕೆ ಅವರ ಹಿಂದಿನ ರಾಜಕೀಯದ ಪರಿಣಾಮಗಳನ್ನು ಮರೆತುಬಿಡಬೇಕೇ? ರಾಮಮಂದಿರ ಚಳವಳಿ, ರಥಯಾತ್ರೆ ಮತ್ತು ಧಾರ್ಮಿಕ ಧ್ರುವೀಕರಣದ ರಾಜಕೀಯಕ್ಕೆ ಅವರು ನೀಡಿದ ಕೊಡುಗೆಯನ್ನು ಇತಿಹಾಸದಿಂದ ಅಳಿಸಿಹಾಕಬೇಕೇ?

ಒಂದು ಕಾಲದಲ್ಲಿ ಅಡ್ವಾಣಿ ಅವರು ಪಕ್ಷದ ಅತ್ಯಂತ ಪ್ರಭಾವಿ ನಾಯಕರಾಗಿದ್ದರು. ಅವರ ಮಾತಿಗೆ ಪಕ್ಷದಲ್ಲಿ ತೂಕವಿತ್ತು. ಆದರೆ ಕಾಲ ಬದಲಾಯಿತು. ಹೊಸ ನಾಯಕತ್ವ ಬಂತು. ಹಳೆಯ ನಾಯಕರು ಹಿಂದೆ ಸರಿದರು.

ಹಾಗಾದರೆ ನಾಳೆ ಇದೇ ಪ್ರಶ್ನೆ ( ) ಮೋದಿ ಅವರ ಮುಂದೆಯೂ ಬರಬಹುದೇ?

ಇಂದು ಮೋದಿ ಅವರ ನಾಯಕತ್ವದಲ್ಲಿ ಪಕ್ಷದ ಸಂಘಟನೆ ಮತ್ತು ಅಧಿಕಾರ ಎರಡೂ ಕೇಂದ್ರೀಕೃತವಾಗಿವೆ ಎಂಬ ವಿಶ್ಲೇಷಣೆಗಳಿವೆ. ಆದರೆ ರಾಜಕೀಯದಲ್ಲಿ ಯಾರೂ ಶಾಶ್ವತವಲ್ಲ. ಸಂಘಟನೆಗೆ ಒಬ್ಬ ನಾಯಕ ಅಗತ್ಯವಿರುವವರೆಗೆ ಆತನನ್ನು ಹೊಗಳುತ್ತದೆ. ಹೊಸ ರಾಜಕೀಯ ಅಗತ್ಯ ಎದುರಾದಾಗ ಅದೇ ಸಂಘಟನೆ ಹೊಸ ಮುಖವನ್ನು ಹುಡುಕುತ್ತದೆ.

ಇಂದು ಅನಿವಾರ್ಯ ನಾಯಕ ಎಂದು ಕರೆಯಲ್ಪಡುವವರು ನಾಳೆ ಮಾರ್ಗದರ್ಶಕರಾಗುವುದಿಲ್ಲ ಎಂಬ ಖಾತರಿ ಏನು?

ಇದು ಮೋದಿ ವಿರೋಧಿಗಳ ಆಸೆಯ ಪ್ರಶ್ನೆಯಲ್ಲ. ಅಧಿಕಾರದ ಸ್ವರೂಪದ ಬಗ್ಗೆ ಕೇಳಬೇಕಾದ ರಾಜಕೀಯ ಪ್ರಶ್ನೆ.

ವಿರೋಧ ಪಕ್ಷಗಳು ಕಲಿಯಬೇಕಾದ ಪಾಠವೇನು?

ಅಡ್ವಾಣಿಯವರ ಬಗ್ಗೆ ಅನುಕಂಪ ವ್ಯಕ್ತಪಡಿಸುವುದರಿಂದ ಬಿಜೆಪಿಯ ರಾಜಕೀಯ ಶಕ್ತಿಯನ್ನು ಕುಗ್ಗಿಸಲು ಸಾಧ್ಯವಿಲ್ಲ. ಅವರ ಹಳೆಯ ಕೊಡುಗೆಗಳನ್ನು ಹೊಗಳುವುದರಿಂದಲೂ ಚುನಾವಣೆಯಲ್ಲಿ ಮತಗಳು ಬರುವುದಿಲ್ಲ.

ವಿರೋಧ ಪಕ್ಷಗಳು ಅರ್ಥ'ವ'ಾಡಿಕೊಳ್ಳ'ಬೇಕಾದ'ದ'್ದು ಸಂಘಟನೆಯ ಶಕ್ತಿ ಹೇಗೆ ನಿರ್ಮಾಣವಾಯಿತು ಎಂಬುದನ್ನು. ಜನರ ಧಾರ್ಮಿಕ ಭಾವನೆಗಳನ್ನು ರಾಜಕೀಯವಾಗಿ ಹೇಗೆ ಬಳಸಿಕೊಳ್ಳಲಾಯಿತು ಎಂಬುದನ್ನು. ಚುನಾವಣಾ ಪ್ರಚಾರ, ಸಂಘಟನೆ, ಮಾಧ್ಯಮ, ಸಂಪನ್ಮೂಲ ಮತ್ತು ನಾಯಕತ್ವದ ಕೇಂದ್ರೀಕರಣ ಹೇಗೆ ಪರಸ್ಪರ ಕೆಲಸ ಮಾಡುತ್ತವೆ ಎಂಬುದನ್ನು.

ಜನರಿಗೆ ಉದ್ಯೋಗ ಬೇಕು, ಬೆಲೆ ಏರಿಕೆಯಿಂದ ಮುಕ್ತಿ ಬೇಕು, ಉತ್ತಮ ಶಿಕ್ಷಣ ಬೇಕು, ಆರೋಗ್ಯ ಬೇಕು, ಸಾಮಾಜಿಕ ನ್ಯಾಯ ಬೇಕು. ಈ ನೈಜ ಪ್ರಶ್ನೆಗಳಿಗೆ ಉತ್ತರ ಕೊಡದೆ ಕೇವಲ ಹಳೆಯ ನಾಯಕರ ರಾಜಕೀಯ ಅನ್ಯಾಯದ ಬಗ್ಗೆ ಮಾತನಾಡಿದರೆ ಜನರು ಎಷ್ಟು ದಿನ ಕೇಳುತ್ತಾರೆ?

ವಿರೋಧ ಪಕ್ಷಗಳು ವ್ಯಕ್ತಿಗಳ ಮೇಲಿನ ಟೀಕೆಯನ್ನು ಮೀರಿ ಜನರ ಬದುಕಿನ ಪ್ರಶ್ನೆಗಳನ್ನು ರಾಜಕೀಯದ ಕೇಂದ್ರಕ್ಕೆ ತರಬೇಕು. ಇಲ್ಲದಿದ್ದರೆ ಒಂದು ರಥಯಾತ್ರೆಯನ್ನು ಟೀಕಿಸಲು ಮತ್ತೊಂದು ರಥಯಾತ್ರೆ ಹೊರಟಂತಾಗುತ್ತದೆ. ಜನರ ಬದುಕು ಮಾತ್ರ ಅಲ್ಲಿಯೇ ಉಳಿಯುತ್ತದೆ.

ಕೊನೆಯ ಮಾತು: ರಾಜಕೀಯದಲ್ಲಿ ಸಿದ್ಧಾಂತವೇ ಅಂತಿಮವೇ, ಅಧಿಕಾರವೇ ಅಂತಿಮವೇ?

ಅಡ್ವಾಣಿ ಅವರ ರಾಜಕೀಯ ಪಯಣ ಒಂದು ಕಹಿ ಸತ್ಯವನ್ನು ತೋರಿಸುತ್ತದೆ. ರಾಜಕೀಯದಲ್ಲಿ ಸಿದ್ಧಾಂತದ ಭಾಷೆ ಎಷ್ಟೇ ಎತ್ತರದಲ್ಲಿರಲಿ, ಅಧಿಕಾರದ ಲೆಕ್ಕಾಚಾರ ಅದಕ್ಕಿಂತ ಎತ್ತರದಲ್ಲಿರುತ್ತದೆ.

ಅಡ್ವಾಣಿ ಅವರು ಹಿಂದುತ್ವದ ರಾಜಕೀಯವನ್ನು ಬಲಪಡಿಸಿದರು. ಅದೇ ರಾಜಕೀಯ ವ್ಯವಸ್ಥೆ ಮುಂದೆ ಹೊಸ ನಾಯಕತ್ವವನ್ನು ಬೆಳೆಸಿತು. ಹೊಸ ನಾಯಕತ್ವ ಅಧಿಕಾರದ ಕೇಂದ್ರವನ್ನು ತನ್ನತ್ತ ಸೆಳೆದುಕೊಂಡಿತು. ಹಳೆಯ ನಾಯಕರು ಇತಿಹಾಸದ ಪುಟಗಳಿಗೆ ಸರಿದರು.

ಆದರೆ ಇಲ್ಲಿ ಒಂದು ಎಚ್ಚರಿಕೆ ಇದೆ. ಜಿನ್ನಾ ಪ್ರಕರಣದಿಂದ ಅಡ್ವಾಣಿಯವರು ಕಲಿತ ಪಾಠವನ್ನು ಕೇವಲ ಮುಂದಿನ ಬಿಜೆಪಿ ನಾಯಕರಿಗೆ ಎಚ್ಚರಿಕೆಯೆಂದು ನೋಡಬಾರದು. ಯಾವುದೇ ರಾಜಕೀಯ ಸಂಘಟನೆಯಲ್ಲಿ ವ್ಯಕ್ತಿಯ ಸ್ವಾತಂತ್ರ್ಯ, ಭಿನ್ನಾಭಿಪ್ರಾಯ ಮತ್ತು ಸೈದ್ಧಾಂತಿಕ ಚರ್ಚೆಗೆ ಎಷ್ಟು ಜಾಗವಿದೆ ಎಂಬುದನ್ನೂ ಅದು ಪ್ರಶ್ನಿಸುತ್ತದೆ.

ಕೊನೆಗೆ ಓದುಗರೇ, ಒಂದು ಸರಳ ಪ್ರಶ್ನೆ.

ಅಡ್ವಾಣಿ ಅವರು ಅಧಿಕಾರಕ್ಕಾಗಿ ಸಿದ್ಧಾಂತವನ್ನು ಬಳಸಿಕೊಂಡರೇ? ಅಥವಾ ಸಿದ್ಧಾಂತಕ್ಕಾಗಿ ಅಧಿಕಾರವನ್ನು ಕಟ್ಟಿದರೇ? ಎರಡೂ ಆಗಿರಬಹುದು. ಆದರೆ ಅಧಿಕಾರದ ಶಿಖರ ತಲುಪಿದ ಮೇಲೆ ಸಂಘಟನೆಗೆ ವ್ಯಕ್ತಿಗಿಂತ ಅಧಿಕಾರವೇ ಮುಖ್ಯವಾಯಿತು ಎಂಬುದರಲ್ಲಿ ಅನುಮಾನವಿಲ್ಲ.

ರಾಜಕೀಯದಲ್ಲಿ ವ್ಯಕ್ತಿಗಳು ಬರುತ್ತಾರೆ, ಹೋಗುತ್ತಾರೆ. ಸಂಘಟನೆಗಳು ಉಳಿಯುತ್ತವೆ. ಸಿದ್ಧಾಂತಗಳು ಬದಲಾಗುತ್ತವೆ. ಆದರೆ ಜನರ ಬದುಕು ಮಾತ್ರ ರಾಜಕೀಯ ಪ್ರಯೋಗಗಳ ಪ್ರಯೋಗಾಲಯವಾಗಬಾರದು.

ಅಡ್ವಾಣಿ ಅವರ ಕಥೆಯಲ್ಲಿ ನಮಗೆ ಕಾಣುವುದು ಒಬ್ಬ ನಾಯಕನ ಪತನ ಮಾತ್ರವಲ್ಲ. ಸಿದ್ಧಾಂತದ ಹೆಸರಿನಲ್ಲಿ ಅಧಿಕಾರ ಕಟ್ಟುವ ರಾಜಕೀಯದ ಸ್ವರೂಪ. ಆ ಅಧಿಕಾರ ಕೊನೆಗೆ ತನ್ನನ್ನೇ ಕಟ್ಟಿದವರನ್ನೂ ಹೇಗೆ ನುಂಗುತ್ತದೆ ಎಂಬುದರ ಎಚ್ಚರಿಕೆಯೂ ಹೌದು.

ರಾಜಕೀಯದಲ್ಲಿ ಯಾರೂ ಶಾಶ್ವತರಲ್ಲ. ಆದರೆ ಅಧಿಕಾರದ ದಾಹ ಮಾತ್ರ ಬಹಳ ಶಾಶ್ವತವಾಗಿ ಕಾಣುತ್ತದೆ!

ಪತ್ರಿಕೆ ಓದುವ ಹವ್ಯಾಸ ಬೆಳಸಿಕೊಳ್ಳಿ

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR